MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 310 | ಶನಿವಾರ : 27-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 310 | SATURDAY : 27-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜಾತಿ ಗಣತಿ ಲೋಪ ದೋಷ ನಿವಾರಿಸಿ

**ಬೆಂಗಳೂರು, ಸೆ. 26–** ಸರ್ವರ್ ಸಮಸ್ಯೆ, ಆಪ್‌ನಲ್ಲಿ ದೋಷ ಮತ್ತಿತರ ಕಾರಣಕ್ಕೆ ಗೊಂದಲದ ಗೂಡಾಗಿರುವ ಜಾತಿ ಗಣತಿಯ ಎಲ್ಲಾ ಲೋಪದೋಷಗಳನ್ನು ನಿವಾರಿಸಿ ಗಣತಿಯ ವೇಗ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ತಾಕೀತು ಮಾಡಿದರು.

ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಕಳೆದ ಸೆ. 22 ರಿಂದ ಆರಂಭಿಸಿರುವ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ 4 ದಿನ ಕಳೆದರೂ ಸಮರ್ಪಕವಾಗಿ ನಡೆಯದೆ ಗೊಂದಲದ ಗೂಡಾಗಿರುವ ಬಗೆಗಿನ ವರದಿಗಳ ಹಿನ್ನೆಲೆಯಲ್ಲಿ ಇಂದು ತಮ್ಮ ಗೃಹ ಕಚೇರಿ ಕೃಷ್ಣಾದಿಂದ ಎಲ್ಲ ಜಿಲ್ಲಾಧಿಕಾರಿಗಳು, ಜಿ.ಪಂ. ಸಿಇಒಗಳು, ವಿವಿಧ ಇಲಾಖೆಗಳ ಮುಖ್ಯಸ್ಥರ ಜತೆ ವಿಡಿಯೋ ಸಂವಾದ ನಡೆಸಿದ ಮುಖ್ಯಮಂತ್ರಿಗಳು ಜಾತಿ ಗಣತಿಯ ತೊಂದರೆಗಳನ್ನು ನಿವಾರಿಸಿ ಗಣತಿಗೆ ಚುರುಕು ನೀಡುವಂತೆ ಸೂಚನೆ ನೀಡಿದರು.

ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಸಮೀಕ್ಷೆಗೆ ರಾಜ್ಯದ ಹೈಕೋರ್ಟ್ ಸಹ ಈಗ ಗ್ರೀನ್ ಸಿಗ್ನಲ್ ನೀಡಿದೆ. ಯಾವುದೇ ತೊಂದರೆಗಳಿಲ್ಲ. ಹಾಗಾಗಿ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಗಣತಿಗೆ ವೇಗ ಕೊಡಿ ಎಂದು ಮುಖ್ಯಮಂತ್ರಿಗಳು ಹೇಳಿದರು.



ಜಾತಿ ಗಣತಿ ಆರಂಭವಾಗಿ ನಾಲ್ಕು ದಿನಗಳಾದರೂ ಸಮೀಕ್ಷೆ ನಿಗದಿಯಂತೆ ನಡೆಯುತ್ತಿಲ್ಲ. ಹೀಗಾದರೆ ನಿಗದಿತ ಗಡುವಾದ ಅ. 7 ರೊಳಗೆ ಗಣತಿ ಮುಗಿಸುವುದು ಕಷ್ಟ ಎಂಬ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜಾತಿ ಗಣತಿಯನ್ನು ಸಮರ್ಪಕವಾಗಿ ನಡೆಸಿ, ತಾಂತ್ರಿಕ ತೊಂದರೆಗಳಾಗಿದ್ದರೆ ಅದನ್ನು ಕೂಡಲೇ ಬಗೆಹರಿಸಿ ಎಂದು ಕಟ್ಟಪ್ಪಣೆ ವಿಧಿಸಿದರು.

ರಾಜ್ಯದ ಹಲವೆಡೆ ಸಮೀಕ್ಷೆದಾರರಿಗೆ ಮೊಬೈಲ್ ಆಪ್ ಸಮರ್ಪಕವಾಗಿ ಕೆಲಸ ಮಾಡದೆ ಸರ್ವರ್‌ಗಳ ಸಮಸ್ಯೆ ಎದುರಾಗಿರುವುದನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ ಗಣತಿದಾರರಿಗೆ ಸಮರ್ಪಕವಾಗಿ ಸಮೀಕ್ಷೆ ಮಾಡಲು ಎಲ್ಲ ರೀತಿಯ ಸೌಲಭ್ಯ, ಸೌಕರ್ಯ ಒದಗಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸಮೀಕ್ಷೆ ಆರಂಭವಾಗಿ 4 ದಿನಗಳಾಗಿವೆ. ಹಲವೆಡೆ ಸಮಸ್ಯೆಗಳಿರುವ ಬಗ್ಗೆ ವರದಿಗಳು ಬರುತ್ತಿವೆ. ಇಷ್ಟಾದರೂ ಸಮಸ್ಯೆಗಳನ್ನು ಪರಿಹರಿಸಲು ಏಕೆ ಕ್ರಮ ಕೈಗೊಂಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿರುವ ಈ ಸಮೀಕ್ಷೆಯಲ್ಲಿ ಭಾಗವಹಿಸದ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಮೀಕ್ಷೆ ಸಂದರ್ಭದಲ್ಲಿ ನಿಕ್ಷ್ಯ ತೋರಿದರೆ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಸಮೀಕ್ಷೆಗೆ ಇ ಆಡಳಿತ ಇಲಾಖೆ ಸಮರ್ಪಕವಾಗಿ ಸಿದ್ಧತೆ **(2ನೇಪುಟಕ್ಕೆ)**

## ಪ್ರಿಯಾಂಕಾ ಉಪೇಂದ್ರ ಹ್ಯಾಕ್ ವಂಚಕರ ಸುಳಿವು ಪತ್ತೆ



**ಬೆಂಗಳೂರು,ಸೆ.26–**ನಟಿ ಪ್ರಿಯಾಂಕಾ ಉಪೇಂದ್ರ ಅವರ ಮೊಬೈಲ್ ಹ್ಯಾಕ್ ಮಾಡಿ 1.65 ಲಕ್ಷ ನಗದು ದೋಚಿರುವ ಹ್ಯಾಕರ್ ಗಳ ಸುಳಿವು ನಗೆ ಪೊಲೀಸರಿಗೆ ದೊರೆತಿದೆ.

ಬಿಹಾರ ಮೂಲದ ಸೈಬರ್ ಖದೀಮರು ಪ್ರಿಯಾಂಕಾ ಉಪೇಂದ್ರ ಅವರ ಮೊಬೈಲ್ ಸಂಖ್ಯೆಯನ್ನು ಹ್ಯಾಕ್ ಮಾಡಿರುವುದು ಗೊತ್ತಾಗಿದ್ದು, ಹ್ಯಾಕ್ ಮಾಡಿ ಕದ್ದ 1.65 ಲಕ್ಷ ರೂಗಳನ್ನು ಹ್ಯಾಕರ್‌ಗಳು ಮೊದಲಿಗೆ ನಾಲ್ಕು ನಕಲಿ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ.ಆ ನಂತರ ಆ ಹಣವನ್ನು ನಳಂದಾದ ಬ್ಯಾಂಕ್ ಖಾತೆ ಒಂದಕ್ಕೆ ವರ್ಗಾವಣೆ ಮಾಡಿದ್ದು,ನಗರ ಪೊಲೀಸರು (2ನೇಪುಟಕ್ಕೆ)

## ಸ್ವಾಮಿ ವಿವೇಕಾನಂದ ಮೆಡಿಕಲ್ ಕಾಲೇಜಿನಲ್ಲಿ ವಿಶ್ವ ಔಷಧಗಾರರ ದಿನಾಚರಣೆ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಸೆ.26–**ಪಟ್ಟಣದ ಸ್ವಾಮಿ ವಿವೇಕಾನಂದ ಮೆಡಿಕಲ್ ಕಾಲೇಜಿನಲ್ಲಿ ವಿಶ್ವ ಔಷಧಗಾರರ ದಿನಾಚರಣೆವನ್ನು ಸಂಸ್ಥೆಯ ಅಧ್ಯಕ್ಷ ಶಾಂತಗೌಡ ಪಾಟೀಲ್ ದಿದ್ದಿಗಿ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.




ಪಟ್ಟಣದ ಗಡಿಯಾರ ಚೌಕದಿಂದ ಪ್ರಾರಂಭವಾದ ಜಾಗೃತ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಔಷಧಗಾರರ ಪಾತ್ರದ ಕುರಿತು ಜನರಲ್ಲಿ ಅರಿವು ಮೂಡಿಸಿದರು. ನಂತರ ಮೆರವಣಿಗೆ ಐಎಂಎ ಭವನದಲ್ಲಿ ಅಂತೆಗೊಂಡಿತು.

ನಂತರ ಜಾಗೃತಿ ಕಾರ್ಯಕ್ರಮವನ್ನು ಸ್ವಾಮಿ ವಿವೇಕಾನಂದ ಕಾಲೇಜಿನಲ್ಲಿ ಕಾರ್ಯಕ್ರಮವನ್ನು ಡಾ, ನಾಗರಾಜ ಉದ್ಘಾಟನೆ ಮಾಡಿ ಫಾರ್ಮಸಿಸ್ಟ್ ಸೇವೆಗಳ ಮಹತ್ವದ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಡಾ,ರಾಜಶೇಖರ, ಅಮರೇಶ, ಶ್ರೀಲಕ್ಷ್ಮಿ ಸೇರಿದಂತೆ ಮೆಡಿಕಲ್ ಕಾಲೇಜಿನ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

## ರಾಷ್ಟ್ರ ಪುರುಷನ ಹೃದಯಭಾಗ ಈ ದೇಶದ ಯುವ ಸಮುದಾಯ: ಡಾ.ಜಯಲಕ್ಷ್ಮೀ ಮಂಗಳಮೂರ್ತಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.26–**ದೇಶವನ್ನು ಪ್ರೀತಿಸಬೇಕೆಂದರೆ ಶಿಕ್ಷಣವನ್ನು ಪ್ರೀತಿಸಬೇಕು. ಶಿಕ್ಷಣವನ್ನು ಪ್ರೀತಿಸಬೇಕೆಂದರೆ ವಿದ್ಯಾರ್ಥಿಗಳನ್ನು ಪ್ರೀತಿಸಬೇಕು. ಉತ್ತಮ ವಿದ್ಯಾರ್ಥಿಗಳನ್ನು ತಾಯಾರು ಮಾಡಲು ಯುವ ವರ್ಗವನ್ನು ಪ್ರೀತಿಸಬೇಕು. ರಾಷ್ಟ್ರ ಪುರುಷನ ಹೃದಯಭಾಗ ಈ ದೇಶದ ಯುವಸಮುದಾಯವಾಗಿದ್ದು ಅವರಿಗೆ ಎಲ್ಲಾ ಆಯಾಮುಗಳಲ್ಲಿ ವೈಚಾರಿಕತೆ,ಜೀವನ ಪ್ರೇಮ,ಜೀವಚೈತನ್ಯ ಕುರಿತು ಶಿಕ್ಷಕರಾದ ನಾವು ತಿಳಿಸಿಕೊಡಬೇಕಾಗಿದೆ ಎಂದು ಹಿರಿಯ ಸಾಹಿತಿ ಡಾ.ಜಯಲಕ್ಷ್ಮಿ ಮಂಗಳಮೂರ್ತಿ ಹೇಳಿದರು.ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ಇಂದಿನ ದಿನಮಾನಗಳಲ್ಲಿನ ತಲ್ಲಣಗಳು,ವಿಪ್ಲವಗಳು ಮನುಷ್ಯ ಜೀವನವನ್ನು ತಲ್ಲಣಗೊಳ್ಳಿಸಿದ್ದು ಜಗತ್ತು ಯಾವದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವ ಗಾಬರಿಯನ್ನು ಜನಸಮಾನ್ಯರಲ್ಲಿ ಮೂಡಿಸುತ್ತಿವೆ ಇವೆಲ್ಲವುಗಳಿಗೆ ಉತ್ತರವನ್ನು ನಮ್ಮ ನಾಡಿನ ತತ್ವಪದಕರರು,



ಶರಣರು, ದರ್ಶನಿಕರು,ಹರಿದಾಸರು ತಮ್ಮ ಕೃತಿಗಳ ಮೂಲಕ ನೀಡಿದ್ದಾರೆ ಎಂದು ತಿಳಿಸಿದರು.

ಹಿರಿಯ ಸಾಹಿತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ನಿವೃತ್ತ ಉಪನ್ಯಾಸಕರಾದ ಡಾಜಯಲಕ್ಷ್ಮೀ ಮಂಗಳಮೂರ್ತಿ ರವರಿಗೆ ಕಲ್ಮಠ ವತಿಯಿಂದ ರಾಜ್ಯಮಟ್ಟದ ಸುವರ್ಣ ದಸರಾ ಸಾಧಕ ಸೀರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.ಕಾರ್ಯಕ್ರಮದಲ್ಲಿ ಶ್ರೀದೇವಿ ಪುರಾಣ ಪ್ರವಚನವನ್ನು ಶ್ರೀ ಅನ್ನದಾನ ಸ್ವಾಮಿಗಳು ನೀಡಿದರು, ಕೊಪ್ಪಳದ ಅಂತರಾಷ್ಟ್ರೀಯ ಜಾನಪದ ಕಲಾವಿದರಾದ ಜೀವನ್ ಸಾಬ್ ಜನಮುಖಿ ತತ್ವ ಸಾಹಿತ್ಯ ಕುರಿತು ಉಪ ನ್ಯಾಸ ನೀಡಿದರು.ಕಲ್ಮಠದ ಶ್ರೀವಿರೂ ಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸ್ವಾಮಿಗಳು, ಬೃಹನ್ಮಠ ನೀಲಗಲ್ ಸಂಸ್ಥಾನ ಮಠದ ಶ್ರೀರೇಣುಕ ಶಾಂತಮಲ್ಲ ಶಿವಾಚಾರ್ಯ ಮಹಾ ಸ್ವಾಮಿಗಳು. ಮಾನ್ವಿ ತಾ.ಕ.ಸಾ,ಪ. ಅಧ್ಯಕ್ಷರಾದ ರವಿಕುಮಾರ ಪಾಟೀಲ್ ವಕೀಲರು, ಸಿಂಧನೂರು ತಾ.ಕ. ಸಾ,ಪ. ಅಧ್ಯಕ್ಷರಾದ ಪಂಪಯ್ಯಸ್ವಾಮಿ ಸಾಲಿ ಮಠ ಸೇರಿದಂತೆ ಇನ್ನಿತರರು ಇದ್ದರು.

## ರೈತರು ಲಾಭದಾಯಕ ಬೆಳೆಗಳನ್ನು ಆಯ್ಕೆ ಮಾಡಿ : ಡಾ.ತಿಪ್ಪಣ್ಣ

**ಯುವ ಮಾರ್ಗ ಸುದ್ದಿ**

**ಸಿರವಾರ, ಸೆ.26–** ರೈತರು ಕೃಷಿಯಲ್ಲಿ ಲಾಭದಾಯಕ ಬೆಳೆಗಳನ್ನು ಆಯ್ಕೆಮಾಡಿಕೋಳ್ಳಬೇಕಿ ಎಂದು ರಾಯಚೂರು ಕೃಷಿವಿಶ್ವ ವಿದ್ಯಾಲಯದ ಕೀಟ ತಜ್ಞರಾದ ಡಾ.ತಿಪ್ಪಣ್ಣ ಹೇಳಿದರು.

ಅವರು ಗುರುವಾರ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ರೈತರು ಬೆಳೆಗಳಿಗೆ ಕೀಟನಾಶಕಗಳ ಸಿಂಪಡಿಸುವಾಗ ಸುರಕ್ಷಿತವಾಗಿ ಬಳಸಿ, ರೈತರು ತಮ್ಮ ಆರೋಗ್ಯ ಕಾಪಾಡಿಕೊಂಡು ಹೋಗಬೇಕು, ಹಾನಿಕಾರಕ ಕೀಟ ನಾಶಕ ಬಳಕೆ ಕಡಿಮೆ ಮಾಡಿ, ತರಕಾರಿಗಳನ್ನು ಬೆಳಗಳು ಕೀಟನಾಶಕಗಳು ಸಿಂಪರಣೆ ಮಾಡಿದ




ನಂತರ ಕಟಾವು ಮಾಡಬೇಡಿ, ಜನರ ಆರೋಗ್ಯ ಕಾಪಾಡುವುದು ರೈತರ ಕೈಯಲ್ಲಿ ಇದೆ ಎಂದು ತಿಳಿಸಿದರು.

ನಂತರ ಡಾ.ಬಸವಣ್ಣಪ್ಪ ಭತ್ತ ಕೂರಿಗೆ ಮೂಲಕ ಬಿತ್ತನೆ ಮಾಡುವುದರಿಂದ ಖರ್ಚುಗಳ ಕಡಿ, ನೀರು ಕಡಿಮೆ, ರೋಗಗಳು ಕಡಿಮೆ ಎಂದು ತಿಳಿಸಿದರು.

ಸರಕಾರಿ ಸಂಘದ 2024–25ನೇ ಸಾಲಿನ ವಾರ್ಷಿಕ ಮುಂಗಡ ಪತ್ರ, ಲೆಕ್ಕಪತ್ರ ಮುಖ್ಯ ಕಾರ್ಯದರ್ಶಿ ಗೌಸ್ ಮೊದ್ದೀನ್ ಓದಿದರು. ಸಂಘದ ಅಧ್ಯಕ್ಷರಾದ ದೇವಪುತ್ರಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಆಂಜಿನಯ್ಯ ಬಿಚ್ಚಾಲಿ, ನಿರ್ದೇಶಕರಾದ ಎನ್.ಬಸ್ಸಪ್ಪಗೌಡ, ಚಂದ್ರುಕಳಸ, ಎಂ.ನಾಗರಾಜಗೌಡ, ಎಂ.ಮಲ್ಲಿಕಾರ್ಜುನ, ಶಾಲಂಸಾಬ್ ಕಾಶ್ಮೀರಿ, ಇಮಾನವೇಲ್,ಬಸವರಾಜ ಇದ್ದರು.

## ಪರಿಶಿಷ್ಟ ಪಂಗಡಕ್ಕೆ ಕುರುಬ ಸಮಾಜ ಸೇರ್ಪಡೆ ವಿರೋಧಿಸಿ ಸಿರವಾರದಲ್ಲಿ ರಸ್ತೆತಡೆದು ಪ್ರತಿಭಟನೆ

**ಯುವ ಮಾರ್ಗ ಸುದ್ದಿ**

**ಸಿರವಾರ, ಸೆ.26–**ರಾಜ್ಯ ಸರ್ಕಾರ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವವನ್ನು ವಿರೋಧಿಸಿ ತಾಲ್ಲೂಕು ವಾಲ್ಮೀಕಿ ಸಮಾಜದವರಿಂದ ಗುರುವಾರ ರಾಜ್ಯ ಹೆದ್ದಾರಿ ರಸ್ತೆತಡೆಯ ಮೂಲಕ ಪ್ರತಿಭಟನೆ ನಡೆಯಿತು.

ವಾಲ್ಮೀಕಿ ಸಮಾಜದ ಅಧ್ಯಕ್ಷ ಕಲ್ಲೂರು ಬಸವರಾಜ ನಾಯಕ ಅವರ ನೇತೃತ್ವದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಪ್ರತಿಭಟನಾ ಮೆರವಣಿಗೆ ಆರಂಭವಾಯಿತು.

ಪರಿಶಿಷ್ಟ ಪಂಗಡಕ್ಕೆ ಕುರುಬ ಮತ್ತು ಇತರೆ ಸಮುದಾಯಗಳನ್ನು ಸೇರ್ಪಡೆಗೊಳಿಸುವ ಹುನ್ನಾರ ರಾಜ್ಯ ಸರಕಾರ ನಿಲ್ಲಿಸಬೇಕು, ಈಗಾಗಲೇ ಸುಳ್ಳು ಜಾತಿ ಪ್ರಮಾಣ



ಪತ್ರ ಪಡೆದು ಎಸ್‌ಟಿ ಫಲಾನುಭವಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಆದೇಶ ನೀಡಬೇಕು, ಸಮುದಾಯದ ಪ್ರಮುಖ ಬೇಡಿಕೆಯಾಗಿದ್ದು, ಪ್ರತಿಭಟನಕಾರರು ಭಿತ್ತಿಪತ್ರಗಳನ್ನು ಹಿಡಿದು ಘೋಷಣೆ ಕೂಗಿದರು.

ತಹಶೀಲ್ದಾರರ ಕಚೇರಿ ರಸ್ತೆಯಲ್ಲಿ ಮಾನವ ಸರಪಳಿ ಮೂಲಕ' ತಹಶೀಲ್ದಾರರ ಮೂಲಕ ರಾಜ್ಯದ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ನೀಡಿ ಒತ್ತಾಯಿಸಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ನಟ ಸುದೀಪ್ ಅವರ ಭಾವಚಿತ್ರದ ಕೇಸರಿ, ಕೆಂಪು, ಹಳದಿ, ಬಿಳಿ ಬಣ್ಣದ ಬಾವುಟಗಳು ರಾರಾಜಿಸಿದವು. ಜಾಗೃತ ಭಿತ್ತಿಪತ್ರಗಳನ್ನು ಹಿಡಿದು ತಮ್ಮ ಬೇಡಿಕೆ ಪ್ರದರ್ಶಿಸಿದರು. ನೆರೆದಿದ್ದ ಸಾವಿರಾರು ಜನರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ.ಪಂ.ಸದಸ್ಯ ಕೃಷ್ಣ ನಾಯಕ, ಗಡ್ಲ ಅಮರೇಶ ನಾಯಕ, ಲಿಂಗಣ್ಣ ನಾಯಕ ಸೈದಾಪೂರು, ಮಲ್ಲಿಕಾರ್ಜುನ**(2ನೇಪುಟಕ್ಕೆ)**

## ಡಾ. ಬಿ.ಆರ್. ಅಂಬೇಡ್ಕರ್ ವಸತಿ ನಿಲಯ: ಶಾಸಕ ಜಿ. ಹಂಪಯ್ಯ ನಾಯಕ್ ಅವರಿಂದ ಸ್ಥಳ ಪರಿಶೀಲನೆ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.26–**ತಾಲೂಕಿನ ಹಿರೇಕೊಟ್ನೆಕಲ್ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ, ಅಮರೇಶ್ವರ ಕ್ಯಾಂಪ್ ಗ್ರಾಮದಲ್ಲಿ ಸುಮಾರು 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ವಸತಿ ನಿಲಯದ ಸ್ಥಳವನ್ನು ಶಾಸಕ ಜಿ. ಹಂಪಯ್ಯ ನಾಯಕ್ ಅವರು ವೀಕ್ಷಿಸಿದರು.



ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ವಸತಿ ನಿಲಯದ ನಿರ್ಮಾಣ ಕಾರ್ಯಕ್ಕೆ ಬೇಕಾದ ಸೌಲಭ್ಯಗಳ ಕುರಿತು ಸ್ಥಳದಲ್ಲಿಯೇ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಬಸವರಾಜ್ ಮಾಲಿ ಪಾಟೀಲ್, ಶಿವಪ್ಪಗೌಡ ಹಳ್ಳಿ ಹೊಸೂರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ಚನ್ನಬಸಪ್ಪಗೌಡ ಬೆಟ್ಟದೂರು, ಮಹದೇವಪ್ಪಗೌಡ ಕಟಾಲಿ, ಗುತ್ತೇದಾರರಾದ ವಸೀಮ್ ಪಾಷಾ ಇನ್ನಿತರ ಮುಖಂಡರುಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೊದಲನೇಯ ಪುಟದಿಂದ

# ಜಾತಿ ಗಣತಿ ಲೋಪ ದೋಷ ನಿವಾರಿಸಿ

ಮಾಡಿಕೊಂಡಿಲ್ಲದಿರುವ ಬಗ್ಗೆ ನಿನ್ನೆ ಸಚಿವ ಸಂಪುಟ ಸಭೆಯಲ್ಲೂ ಚರ್ಚೆಗಳು ನಡೆದಿದ್ದವು. ನೆಟ್‌ವರ್ಕ್ ಸಮಸ್ಯೆ, ಆಪ್ ಲೋಪದೋಷ, ಸರ್ವರ್ ಸಮಸ್ಯೆ, ಓಟಿಪಿ ಸಮಸ್ಯೆ ಎಲ್ಲವನ್ನು ಸಚಿವ ಸಂಪುಟ ಸಭೆಯಲ್ಲಿ ಕೆಲ ಸಚಿವರು ಪ್ರಸ್ತಾಪಿಸಿ, ಇದನ್ನೆಲ್ಲಾ ಕೂಡಲೆ ನಿವಾರಿಸದಿದ್ದರೆ ಸಮೀಕ್ಷೆಗೆ ಹಿನ್ನಡೆಯಾಗುತ್ತದೆ. ಜತೆಗೆ ಜನರ ಆಕ್ರೋಶಕ್ಕೂ ಒಳಗಾಗಬೇಕಾಗುತ್ತದೆ ಎಂಬುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದರು.

ಜಿಲ್ಲಾಧಿಕಾರಿಗಳು ಮತ್ತು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಿಡಿಯೋ ಸಂವಾದದಲ್ಲಿ ಸಚಿವರುಗಳ ಅಭಿಪ್ರಾಯಗಳನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು ಕೂಡಲೇ ಎಲ್ಲಾ ತೊಂದರೆಗಳನ್ನು ನಿವಾರಿಸಿ ಸಮೀಕ್ಷೆಗೆ ವೇಗ ನೀಡಬೇಕು. ನಿರ್ಲಕ್ಷ್ಯವನ್ನು ಸಹಿಸಲ್ಲ ಎಂದು ಹೇಳಿದರು.

ಜಿಲ್ಲಾಧಿಕಾರಿಯಿಂದ ಮಾಹಿತಿ

ಈ ವಿಡಿಯೋ ಸಂವಾದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯ ಪ್ರಗತಿ ಸಮೀಕ್ಷೆಗೆ ಆಗಿರುವ ತೊಂದರೆ ಎಲ್ಲಾದರ ಬಗ್ಗೆಯೂ ಪ್ರತಿ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಕೊಂಡರು.

ಸಮೀಕ್ಷೆ ಸಂದರ್ಭದಲ್ಲಿ ತೊಂದರೆಯಾದರೆ ಅದನ್ನು ಕೂಡಲೇ ಹಿಂದುಳಿದ ವರ್ಗಗಳ ಆಯೋಗದ ಗಮನಕ್ಕೆ ತಂದು ಲೋಪದೋಷಗಳನ್ನು ಸರಿಪಡಿಸಿಕೊಂಡು ಗಣತಿಯನ್ನು ಸಮರ್ಪಕವಾಗಿ ನಡೆಸಿ ಎಂದು ಕಿವಿಮಾತು ಹೇಳಿದರು.

ವಿಡಿಯೋ ಸಂವಾದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಹೆಚ್.ಕೆ. ಪಾಟೀಲ್, ಶಿವರಾಜ ತಂಗಡಗಿ, ಕೃಷ್ಣಭೈರೇಗೌಡ, ರಹೀಂಖಾನ್, ಭೈರತಿ ಸುರೇಶ್,ಮಧುಬಂಗಾರಪ್ಪ, ಬೋಸರಾಜು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕಾನೂನು ಸಲಹೆಗಾರ ಪೊನ್ನಣ್ಣ, ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ,ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್,ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಪರಿಶಿಷ್ಟ ಪಂಗಡಕ್ಕೆ ಕುರುಬ ಸಮಾಜ ಸೇರ್ಪಡೆ ವಿರೋಧಿಸಿ ಸಿರವಾರದಲ್ಲಿ ರಸ್ತೆತಡೆದು ಪ್ರತಿಭಟನೆ

ಶೀಕಂಟಿ, ಸೂರಿ ಹುಸೇನಪ್ಪ ನಾಯಕ, ಸೋಮ ನಾಯಕ ಬಾಗಲವಾಡ, ಅಪ್ಪಾಜಿ ನಾಯಕ, ವೆಂಕೋಬ ನಾಯಕ ಬಾಗಲವಾಡ ಸಮಾಜದ ಮುಖಂಡರು ಪ್ರತಿಭಟನೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಪ.ಪಂ ಉಪಾಧ್ಯಕ್ಷೆ ಲಕ್ಷ್ಮೀ ಆದೇಪ್ಪ ನಾಯಕ, ವೆಂಕಟೇಶ್ ದೊರೆ, ಸೂರಿ ದುರುಗಣ್ಣ ನಾಯಕ, ಗಡ್ಲ ಚನ್ನಬಸವ ನಾಯಕ, ಹುಲಿ ನಾಯಕ ಗಣದಿನ್ನಿ, ಮಹಾದೇವ ನಾಯಕ ಗಣದಿನ್ನಿ, ರಮೇಶ ದೊರೆ ಚಿಂಚರಕಿ, ಅಯ್ಯಪ್ಪ ದೊರೆ ಹೀರಾ, ಮಲ್ಲಿಕಾರ್ಜುನ ವಾಲ್ಮೀಕಿ ಮಲ್ಲಟ, ಭರತ ನಾಯಕ ಸಿರವಾರ, ಚನ್ನಪ್ಪ ಚನ್ನೂರು, ಯಲ್ಲಪ್ಪ ದೊರೆ, ಡಿ.ಅರುಣ್ ಕುಮಾರ ನಾಯಕ ಬಲ್ಲಟಗಿ, ಗೋಪಾಲ ನಾಯಕ ಹರವಿ, ವಜ್ರದಯ್ಯ ನಾಯಕ ಮಾಚನೂರು, ಬಸವರಾಜ ನಾಯಕ ಗಡ್ಲ, ಈರಣ್ಣ ನಾಯಕ ಗಣದಿನ್ನಿ, ರಂಗನಾಥ ನಾಯಕ, ರಾಜಗೋಪಾಲ್ ನಾಯಕ, ರಾಜೇಶ ನಾಯಕ, ವೆಂಕಟೇಶ ಶಂಕ್ರಿ, ಮಂಜುನಾಥ ಮರಾಟ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪ್ರಿಯಾಂಕಾ ಉಪೇಂದ್ರ ಹ್ಯಾಕ್ ವಂಚಕರ ಸುಳಿವು ಪತ್ತೆ

ಎಲ್ಲ ಬ್ಯಾಂಕ್ ಖಾತೆಗಳ ವಿವರಗಳ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಬ್ಯಾಂಕ್ ಖಾತೆಗಳ ವಿವರಗಳನ್ನು ಸಂಪಾದಿಸಿರುವ ಪೊಲೀಸರು ಇದೀಗ ಬಿಹಾರಕ್ಕೆ ತೆರಳಿ ಆರೋಪಿಗಳನ್ನು ಬಂಧಿಸಲು ಮುಂದಾಗಿದ್ದಾರೆ. ಡಿಸಿಪಿ ಅಕ್ಷಯ್ ಮಚೀಂದ್ರ ಅವರು ನೀಡಿರುವ ಮಾಹಿತಿಯನ್ನು ಬಿಹಾರಕ್ಕೆ ತೆರಳಲು ವಿಶೇಷ ಪೊಲೀಸ್ ತಂಡವನ್ನು ರೆಡಿ ಮಾಡಲಾಗಿದ್ದು, ಶೀಘ್ರವೇ ತಂಡ ಬಿಹಾರಕ್ಕೆ ತೆರಳಲಿದೆ.

1219279295167# ಸಂಖ್ಯೆ ಬಳಸಿ ಬ್ಯಾಂಕ್ ಖಾತೆಯನ್ನು ಆರೋಪಿಗಳು ಹ್ಯಾಕ್ ಮಾಡಿದ್ದಾರೆ. ಇದೇ ರೀತಿಯ ಪ್ಯಾಟರ್ನ್ ಸಂಖ್ಯೆ ಬಳಸಿ ಆಂಧ್ರ ಪ್ರದೇಶ, ತೆಲಂಗಾಣ ಇತರೆ ಕೆಲವೆಡೆಯೂ ಮೊಬೈಲ್‌ಗಳನ್ನು ಹ್ಯಾಕ್ ಮಾಡುವ ಪ್ರಯತ್ನವನ್ನು ಆರೋಪಿಗಳು ಮಾಡಿರುವುದು ಬೆಂಗಳೂರು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ.

ಪಾರ್ಸಲ್ ಬಂದಿದೆ ಎಂದು ಪ್ರಿಯಾಂಕಾ ಉಪೇಂದ್ರ ಅವರನ್ನು ನಂಬಿಸಿ ಅವರಿಂದ ಕೆಲ ಸಂಖ್ಯೆಗಳನ್ನು ಡಯಲ್ ಮಾಡಿಸಿರುವ ಹ್ಯಾಕರ್‌ಗಳು ಬಳಿಕ ಪ್ರಿಯಾಂಕಾ ಅವರ ಮೊಬೈಲ್‌ನ ಕಂಟ್ರೋಲ್ ತೆಗೆದುಕೊಂಡು, ಪ್ರಿಯಾಂಕಾ ಅವರ ಪುತ್ರ ಮತ್ತು ಸಂಬಂಧಿಗೆ ಪ್ರಿಯಾಂಕಾ ಅವರ ಮೊಬೈಲ್ ನಂಬರ್ ಬಳಸಿ ಮೆಸೇಜ್ ಮಾಡಿದ್ದಾರೆ. ಅವರಿಗೆ ಹಣ ಹಾಕುವಂತೆ ಹೇಳಿದ್ದಾರೆ. ಅದರಂತೆ ಪ್ರಿಯಾಂಕಾ ಅವರ ಪುತ್ರ ಹಾಗೂ ಅವರ ಸಂಬಂಧಿ 1.65 ಲಕ್ಷ ರೂ ಹಣವನ್ನು ಹ್ಯಾಕರ್‌ಗಳು ಹೇಳಿದ ಖಾತೆಗೆ ಹಾಕಿದ್ದಾರೆ. ಆದರೆ ಅಷ್ಟರಲ್ಲೆ ಎಚ್ಚೆತ್ತ ಪ್ರಿಯಾಂಕಾ ಉಪೇಂದ್ರ ಖಾತೆಯನ್ನು ಬ್ಲಾಕ್ ಮಾಡಿಸಿದ್ದಾರೆ. ಇನ್ನು ಕೇವಲ ಹತ್ತು ನಿಮಿಷ ತಡವಾಗಿದ್ದರೂ ಸಹ 10 ಲಕ್ಷ ರೂಗಳನ್ನು ಕಳೆದುಕೊಳ್ಳಬೇಕಿತ್ತು. ಬಳಿಕ ಪ್ರಿಯಾಂಕಾ ಉಪೇಂದ್ರ ಮತ್ತು ಉಪೇಂದ್ರ ಅವರುಗಳು ಪೊಲೀಸರಿಗೆ ದೂರು ನೀಡಿದ್ದು, ಇದೀಗ ಹ್ಯಾಕರ್‌ಗಳ ಬಗ್ಗೆ ಸುಳಿವು ಪೊಲೀಸರಿಗೆ ದೊರೆತಿದೆ.

# ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಆತ್ಮವಿಶ್ವಾಸ ಹೆಚ್ಚಳ: ಡಾ.ಕಣ್ಣೂರು



**ಕಲಬುರಗಿ,ಸೆ.26–**ಮಹಿಳೆಯರು ಕ್ರೀಡೆಯಲ್ಲಿ ತೊಡಗಿಸಿ ಕೊಳ್ಳುವುದರಿದ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲ ಸಚಿವ ಮೌಲ್ಯಮಾಪಕರಾದ .ಡಾ.ಎನ್. ಜಿ.ಕಣ್ಣೂರು ಹೇಳಿದರು.

ನಗರದ ಕೆಪಿಸಿ ಶಿಕ್ಷಣ ಸಂಸ್ಥೆಯ ಡಾ.ಅಂಬೇಡ್ಕರ್ ಕಲಾ ವಾಣಿಜ್ಯ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಮತ್ತು ಡಾ.ಅಂಬೇಡ್ಕರ್ ಪದವಿ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದದ 2025-26ನೇ ಸಾಲಿನ ವಿಶ್ವವಿದ್ಯಾಲಯದ ಮಹಿಳಾ ಕಬ್ಬಡ್ಡಿ ಆಯ್ಕೆಯ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಒಂದೆಡೆ ಗಂಡು ಮಕ್ಕಳಿಗೆ ತಾವೇನು ಕಮ್ಮಿ ಇಲ್ಲವೆಂಬಂತೆ ಭರ್ಜರಿ ಕಬಡ್ಡಿ ಆಡಿದ ಯುವತಿಯರು, ಕಬ್ಬಡ್ಡಿ ಆಟವು ಉತ್ತಮ ದೈಹಿಕ ಸಾಮರ್ಥ್ಯ, ಚುರುಕುತನ, ಸಮನ್ವಯ, ಶಿಸ್ತು ಮತ್ತು ಏಕಾಗ್ರತೆಯನ್ನು ಬೆಳೆಸಲು ಸಹಾಯ ಮಾಡುತ್ತದೆ ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೆಪಿಇ ಸಂಸ್ಥೆಯ ಆಡಳಿತ ಅಧಿಕಾರಿ ಡಾ.ಚಂದ್ರಶೇಖರ್ ಶೀಲವಂತ ಅವರು ಮಾತನಾಡುತ್ತ, ಕ್ರೀಡೆಯಲ್ಲಿ ಮಹಿಳೆಯರು ಸಾಧನೆ ಮಾಡಿದಾಗ, ಅದು ಅವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಿಕೆಯನ್ನು ತಂದುಕೊಡುತ್ತದೆ. ಕಬ್ಬಡ್ಡಿ ಕ್ರೀಡೆಯಲ್ಲಿ ಮಹಿಳೆಯರ ಮಹತ್ವವೆಂದರೆ, ಇದು ಮಹಿಳಾ ಸಬಲೀಕರಣಕ್ಕೆ, ಅವರ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ವೇದಿಕೆ ಒದಗಿಸುತ್ತದೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಕೆಪಿಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಾಂತಪ್ಪ ಸೂರನ್ ಅವರು ಮಾತನಾಡುತ್ತಾ ಕಬ್ಬಡ್ಡಿ ಕ್ರೀಡೆಯು ನ್ಯಾಯೋಚಿತ ಆಟ, ಎದುರಾಳಿಗಳ ಗೌರವ ಮತ್ತು ಕ್ರೀಡಾಸ್ಫೂರ್ತಿಯ ತತ್ವಗಳನ್ನು ಎತ್ತಿಹಿಡಿಯಲು ಪ್ರೋತ್ಸಾಹಿಸುತ್ತದೆ. ಇವತ್ತಿನ ಮಹಿಳೆಯರಲ್ಲಿ ಕಬ್ಬಡಿ ಆಟ ತುಂಬಾ ಪ್ರಯೋಜನ ನೀಡುತ್ತದೆ ಎಂದರು.

ಕಬ್ಬಡಿ ಮಹಿಳಾ ತಂಡದಲ್ಲಿ ಸುಮಾರು 10 ಕಾಲೇಜಿನ ತಂಡಗಳು ಭಾಗವಹಿಸಿದ್ದವು ಇವುಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇಡಂ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ ಸರ್ಕಾರಿ ಪದವಿ ಮಹಾವಿದ್ಯಾಲಯ ಸ್ವಾಯತ್ ಕಲ್ಬುರ್ಗಿ ಎರಡನೇ ಸ್ಥಾನವನ್ನು ಪಡೆದಿದ್ದಾರೆ ವಿಜೇತರಾದ ವಿದ್ಯಾರ್ಥಿನಿಯರಿಗೆ ಕಲ್ಬುರ್ಗಿ ಮಹಾನಗರ ಪಾಲಿಕೆಯ ಮಹಾಪೌರರಾದ ವರ್ಷಾ ರಾಜೀವ್ ಜಾನೆ ಅವರು ಟ್ರೋಫಿ ವಿತರಿಸುವುದರ ಮೂಲಕ ಸೋಲು ಗೆಲುವು ಎನ್ನುವುದು ಇರುತ್ತೆ ಗೆದ್ದವರು ಜೀವನದಲ್ಲಿ ಮುಂದುವರಿಯುತ್ತಾ ಸೋತವರು ಇನ್ನಷ್ಟು ಶ್ರಮಪಡಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದ್ದರು ಮಹಿಳೆಯರ ಕಬ್ಬಡ್ಡಿ ಆಟ ಕಂಡು ಚಪ್ಪಾಳೆ ತಟ್ಟಿ ಹುರುದುಂಬಿದ ಪ್ರೇಕ್ಷಕರು, ಸಮಾರಂಭದಲ್ಲಿ ಕಾಲೇಜಿನ ಪ್ರಭಾರಿ ಪ್ರಾಂಶುಪಾಲರಾದ ಸಿದ್ದಪ್ಪ ಕಾಂತಾ ಐಕ್ಯೂಸಿಯ ಸಂಯೋಜಕರಾದ ಡಾ. ಸಿದ್ದಾರ್ಥ್ ಮದನ್ಕರ್ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ ಡಾ.ನಿರ್ಮಾಣ ಸಿರಗಾಪುರ್, ಡಾ.ಸುದರ್ಶನ್ ಮದನ್ಕರ್ ಡಾ.ಗಾಂಧೀಜಿ ಮೋಳಕೆರೆ ಡಾ.ದತ್ತುರಾಯ ಪಾಲ್ಗೊಂಡಿದ್ದರು.

# ನವಲಕಲ್ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದ ಮಾಜಿ ಸಚಿವ ಕೆ.ಶಿವನಗೌಡ ನಾಯಕ



ಯುವ ಮಾರ್ಗ ಸುದ್ದಿ

**ಸಿರವಾರ, ಸೆ.26–**ನವಲಕಲ್ ಶ್ರೀಮಠದಲ್ಲಿ ದಸರಾ ನಿಮಿತ್ಯ ನಡೆಯುತ್ತಿರುವ 11 ದಿನಗಳ ಕಾಲ ಶ್ರೀ ಶಾಂಭವಿ ದೇವಿಯ ಪೂಜಾ ಕಾರ್ಯಕ್ರಮದ ಅಂಗವಾಗಿ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರು ಮಂಗಳವಾರ ಸಂಜೆ ಶ್ರೀಮಠಕ್ಕೆ ಭೇಟಿ ನೀಡಿ ಅಭಿನವಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದುಕೊಂಡರು.

ನಂತರ ಅವರು ಮಾತನಾಡಿ ನವಲಕಲ್ ಮಠದ ಲಿಂ.ಶ್ರೀ ಸೋಮಶೇಖರ ಸ್ವಾಮಿಗಳು ಈ ಭಾಗದಲ್ಲಿ ಪವಾಡ ಪುರುಷರಾಗಿದ್ದಾರೆ, ನವಲಕಲ್ ಶ್ರೀಮಠದ ಶಕ್ತಿ ಹೊಂದಿದ ಮಠವಾಗಿದೆ ನಾನು ಕೂಡ ಶ್ರೀಮಠದ ಭಕ್ತನಾಗಿ ಬಂದಿದ್ದೇನೆ ಪ್ರಸ್ತುತ ಪೂಜ್ಯ ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಎಲ್ಲಾ ಸಮುದಾಯಗಳನ್ನು ಜೊತೆಗೂಡಿ ದೊಡ್ಡ ಭಕ್ತ ಸಮೂಹವನ್ನೇ ಕಟ್ಟುತ್ತಿದ್ದಾರೆ ಶ್ರೀಮಠದ ಕೀರ್ತಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಅವರು ಶುಭ ಕೋರಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಮಲ್ಲಿಕಾರ್ಜುನ ಜಕ್ಕಲದಿನ್ನಿ, ದೇವಣ್ಣ ನವಲಕಲ್ ಸೇರಿದಂತೆ ಶ್ರೀ ಮಠದ ಭಕ್ತರು ಇದ್ದರು.

# ಸರ್ವ ರೋಗಗಳಿಗೆ ಮದ್ದು ಅರೆಯುವ ಶಕ್ತಿ ಆಯುರ್ವೇದಕ್ಕಿದೆ : ಡಾ.ಗಾಯತ್ರಿ



**ಔರಾದ್.ಸೆ,26–**ಆಯುರ್ವೇದ ಭಾರತದ ಪ್ರಾಚೀನ ವೈದ್ಯ ಪದ್ಧತಿಯಾಗಿದೆ, ಈ ವೈದ್ಯ ಪದ್ಧತಿಗೆ ಎಲ್ಲ ರೋಗಗಳಿಗೂ ಮದ್ದು ಅರೆಯುವ ಶಕ್ತಿಯಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಗಾಯತ್ರಿ ಹೇಳಿದರು.

ಪಟ್ಟಣದ ಅಮರೇಶ್ವರ ಕಾಲೇಜಿನಲ್ಲಿ ಮಂಗಳವಾರ ಔರಾದ ತಾಲೂಕು ಆಯುಷ್ ವೈದ್ಯರ ಸಂಘ ಹಮ್ಮಿಕೊಂಡ ವಿಶ್ವ ಆಯುರ್ವೇದ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಆಯುರ್ವೇದದ ತವರೂರಾಗಿರುವ ಭಾರತದಲ್ಲಿಯೇ ಆಯುರ್ವೇದದ ಬಗ್ಗೆ ಅಸಡ್ಡೆ ತೋರುತ್ತಿರುವುದು ಅತ್ಯಂತ ವಿಷಾದನೀಯ ಎಂದರು. ನಾನು ಬೆಳೆದಿರುವದು ಗುಡ್ಡಗಾಡು ಪ್ರದೇಶದಲ್ಲಿ ಮನೆಯಲ್ಲಿ ಆಯುರ್ವೇದ ಬಳಕೆ ಮಾಡುವುದರಿಂದ ಇಂದಿಗೂ ಆಯೋಗ್ಯದಲ್ಲಿ ಸಮಸ್ಯೆ ಬಂದಿಲ್ಲ ಎಂದರು. ನೀಲಗಿರಿ ಎಲೆಗಳು ಆರೋಗ್ಯಕ್ಕೆ ಪ್ರಯೋಜನವಾಗುತ್ತವೆ ಎಂದರು. ತುಳಸಿಯು ಅನೇಕ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಲಿದೆ ಎಂದರು.

ತಹಸೀಲ್ದಾರ್ ಮಹೇಶ ಪಾಟೀಲ್ ಮಾತನಾಡಿ, ಪ್ರಾಚೀನ ಆಯುರ್ವೇದದ ತತ್ವಗಳನ್ನು ಸಂಪೂರ್ಣವಾಗಿ ಪಾಲಿಸಿದರೆ ನಿಶ್ಚಿತವಾಗಿಯೂ ಶತಾಯುಷಿಗಳಾಗಬಹುದೆಂದು ಸಲಹೆ ನೀಡಿದರು. ಬ್ರಿಟಿಷರು ನಮ್ಮ ದೇಶದ ಆಯುರ್ವೇದ ನಾಶ ಮಾಡಲು ಅನೇಕ ಪ್ರಯತ್ನ ಮಾಡಿದರು. ಆದರೂ ಇಂದಿಗೂ ನಮ್ಮಲ್ಲಿ ಆಯುರ್ವೇದ ಔಷಧ ಜೀವಂತವಾಗಿದೆ ಎಂದರು.

ಸಿಪಿಐ ರಘುವೀರಸಿಂಗ್ ಠಾಕೂರ್ ಮಾತನಾಡಿ, ಆಧುನಿಕ ವೈದ್ಯ ಪದ್ಧತಿಯಲ್ಲಿ ವಿವಿಧ ಅಡ್ಡಪರಿಣಾಮಗಳಾಗುತ್ತಿವೆ. ಔಷಧಿಗಳ ಬಳಕೆಯಿಂದ ಜೀವಿತಾವಧಿಯ ಮೇಲೆಯೂ ಸಹ ಪರಿಣಾಮ ಬೀರುತ್ತಿದೆ. ಯಾವುದೇ ಅಡ್ಡ ಪರಿಣಾಮಗಳಿಲ್ಲದ ಆಯುರ್ವೇದ ಔಷಧಿಗಳನ್ನು ಬಳಕೆ ಮಾಡಬೇಕು. ವೈದ್ಯರು ವಲಯ ಮಟ್ಟದಲ್ಲಿ ಆಸ್ಪತ್ರೆ ತೆರೆದು ಜನರಿಗೆ ಸೇವೆ ನೀಡಬೇಕು. ಶಿಕ್ಷಕ, ವೈದ್ಯರಿಗೆ ಜನ ದೇವರ ಸ್ಥಾನದಲ್ಲಿ ನೋಡುತ್ತಾರೆ ಎಂದರು.

ಆಯುಷ್ ವೈದ್ಯರ ಸಂಘ ತಾಲೂಕು ಅಧ್ಯಕ್ಷ ಡಾ. ನಾಗನಾಥ ಕೌಟಗೆ ಪ್ರಾಸ್ತಾವಿಕ ಮಾತನಾಡಿದರು. ಡಾ. ಅಶ್ವಿನಿ ಕಸ್ತೂರೆ, ಡಾ.ಶಿಲ್ಪಾ ಫುಲಾರಿ ಮಾತನಾಡಿದರು. ವೇದಿಕಾ ಎಸ್. ಧನ್ವಂತರಿ ಶ್ಲೋಕ ಹೇಳಿದರು. ಕು. ಅದ್ವೈತ ಕೌಟಗೆ ಭಾಷಣ ಮಾಡಿದರು. ಅಮರೇಶ್ವರ ಕಾಲೇಜಿನ ಅಧ್ಯಕ್ಷ ಪ್ರಫುಲ್ ಪಾಂಡೆ, ಸಂಘದ ಜಿಲ್ಲಾ ಉಪಾಧ್ಯಕ್ಷ ಲೋಕೇಶ ಬಿರಾದಾರ್, ಡಾ.ಮಹೇಶ ಫುಲಾರಿ, ಡಾ.ಲಕ್ಷ್ಮೀಕಾಂತ ವಲ್ಲೇಪೂರೆ, ರವೀಂದ್ರ ಮೀಸೆ, ಡಾ. ಮೀನಾಕ್ಷಿ ಸ್ವಾಮಿ, ಡಾ. ಕುಷಾವತಿ ಮುಗಳೆ, ಡಾ.ಕುಸುಮಾ ಬಿರಾದಾರ್, ಡಾ.ಅನಿಲಕುಮಾರ ಬಿರಾದಾರ, ಡಾ.ಗೋಪಾಲರಡ್ಡಿ, ಡಾ.ರವಿ ಕುಮಾರ ಗುಡುರೆ, ಡಾ.ಸುಚಿತಾ ಉಪ್ಪೆ ಸೇರಿದಂತೆ ತಾಲೂಕಿನ ಆಯುಷ್ ವೈದ್ಯರು ಪಾಲ್ಗೊಂಡಿದ್ದರು. ಡಾ.ಸಂಗಮೇಶ ಬಿರಾದಾರ ಸ್ವಾಗತಿಸಿದರು. ಶಿಕ್ಷಕ ಮಲ್ಲಿಕಾರ್ಜುನ ಟಂಕಸಾಲೆ ನಿರೂಪಿಸಿದರು. ಡಾ.ರಂಜಿತ ಬಿರಾದಾರ ವಂದಿಸಿದರು.

# ಹೊರ ಗುತ್ತಿಗೆಯನ್ನು ರದ್ದುಗೊಳಿಸಲು ಆಗ್ರಹಿಸಿ ಧರಣಿ



**ಬಳ್ಳಾರಿ,ಸೆ.26–** ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ, ವಿಮ್ಸ್ ಗುತ್ತಿಗೆ ನೌಕರರ ಸಂಘ, ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಕಾರ್ಮಿಕರ ಸಂಘ, ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳ ಗುತ್ತಿಗೆ ನೌಕರರ ಸಂಘ ಹಾಗೂ ಸ್ಪಾಂಜ್ ಐರನ್ ಕಾರ್ಮಿಕರ ಸಂಘಗಳಿಂದ ಇಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ಹೊರ ಗುತ್ತಿಗೆಯನ್ನು ರದ್ದುಗೊಳಿಸಿ, ಖಾಯಂ ನೇಮಕಾತಿ ಮಾಡಬೇಕು, ಈಗಾಗಲೇ ನಿರ್ಧರಿಸಿದಂತೆ ವಿವಿದೋದ್ದೇಶ ಕಾರ್ಮಿಕರ ಸಹಕಾರಿ ಸಂಘ ರಚಿಸಲು ಕ್ರಮ ಕೈಗೊಳ್ಳಬೇಕು. ಪರಿಷ್ಕೃತ ಕನಿಷ್ಠ ವೇತನ ಹೆಚ್ಚಳ ಜಾರಿಗೆ ತರಬೇಕು, ಬಳ್ಳಾರಿಯಲ್ಲಿ ಇಎಂ ಆಸ್ಪತ್ರೆ ಪ್ರಾರಂಭಿಸಬೇಕು ಎಂದು ಧರಣಿ ಹಮ್ಮಿಕೊಳ್ಳಲಾಗಿತ್ತು.

ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕಾ.ಕೆ.ಸೋಮಶೇಖರ್ ಮಾತನಾಡಿ " ಗುತ್ತಿಗೆ ಕಾರ್ಮಿಕರದು ಅತ್ಯಂತ ಸಂಕಷ್ಟದ ಬದುಕಾಗಿದೆ. ಬಹುತೇಕ ಸರ್ಕಾರಿ ಇಲಾಖೆಗಳು, ಕಾರ್ಖಾನೆಗಳು ಗುತ್ತಿಗೆ ಕಾರ್ಮಿಕರ ಶ್ರಮದ ಮೇಲೆಯೇ ಅವಲಂಬಿತವಾಗಿವೆ. ಆದರೂ ಗುತ್ತಿಗೆ ಕಾರ್ಮಿಕರ ಶ್ರಮಕ್ಕೆ ಕವಡೆ ಕಾಸಿನ ಬೆಲೆಯಿಲ್ಲ. ಬಿಜೆಪಿ ತಂದಿರುವ 4 ಲೇಬರ್ ಕೋಡ್ ಗಳು ಕಾರ್ಮಿಕರನ್ನು ಸಂಪೂರ್ಣವಾಗಿ ಗುಲಾಮರನ್ನಾಗಿಸುತ್ತದೆ. ಸರ್ಕಾರಿ ಇಲಾಖೆಗ ಳಲ್ಲಿ ಗುತ್ತಿಗೆ ಹೊರಗುತ್ತಿಗೆ ಪದ್ಧತಿ ಅಂತೂ ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಹೊರಗುತ್ತಿಗೆ ಕಾರ್ಮಿಕರು ಹೆಚ್ಚೆಚ್ಚು ಸಂಘಟಿತರಾಗಬೇಕು ಎಂದರು.

# ಶಿಕ್ಷಕ/ಉಪನ್ಯಾಸಕರು ಹೀಗಿದ್ದರೆ ಚೆಂದ.....

ಗುರುವಿನ ಗುಲಾಮನಾಗುವುತನಕ ದೊರೆಯದಣ್ಣ ಮುಕುತಿ ಎಂಬ ನಾಣ್ಣುಡಿಯಂತೆ ಗುರುವಿನ ಸ್ಥಾನದಲ್ಲಿರುವ ಶಿಕ್ಷಕ/ಉಪನ್ಯಾಸಕರು ತಮ್ಮಲ್ಲಿರುವ ಕೌಶಲ್ಯದಿಂದ ಪ್ರತಿ ಕ್ಷೇತ್ರದಲ್ಲೂ ಬೆಳೆಯುವಂತೆ ಮಾಡುವ ಆಗಾಧ ಶಕ್ತಿ ಆತನ ಬಳಿ ಇದೆ. ಒಬ್ಬ ಶಿಕ್ಷಕ ಉಪನ್ಯಾಸಕನಿಲ್ಲದಿದ್ದರೆ ಯಾವ ವ್ಯಕ್ತಿಯು ಪರಿಪೂರ್ಣವಾಗಿ ರೂಪಗೊಳ್ಳಲು ಸಾಧ್ಯವಿಲ್ಲ ಅಂತಹ ಗುರುವಿನ ಸ್ಥಾನದಲ್ಲಿರುವ ಶಿಕ್ಷಕ/ಉಪನ್ಯಾಸಕರು ಹೇಗಿರಬೇಕು ಎಂಬುದರ ಕುರಿತಂತೆ ಲೇಖಕ ಮಹಿಬೂಬ್ ಮದ್ಲಾಪುರ ಅವರು ಕೆಲವೊಂದು ಅಂಶಗಳನ್ನು ಲೇಖನದ ಮೂಲಕ ತಿಳಿಸಿದ್ದಾರೆ.

* ಸಮಯ ಪಾಲನೆ
* ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡುವುದು.
* ಪಾಠ ಪೂರ್ವ ತಯಾರಿ ಇರಬೇಕು.
* ಕೌಶಲ್ಯ ಬರಿತ ಪಾಠ ನಿನ್ನಲ್ಲಿರಬೇಲು.
* ಕಪ್ಪು ಹಲಗೆಯ ಮೇಲೆ ಮಕ್ಕಳ ಇಷ್ಟವಾಗಿರುವ ಹಾಗೆ ಬರೆಯಬೇಕು.
* ನಿರರ್ಗಳಯಿಂದ ಮಾತಾಡುವ ಕಲೆ ಇರಬೇಕು.
* ನಿನ್ನ ಜೀವನ ಮಾದರಿಯಾಗಿರಬೇಕು.
* ತಮ್ಮ ವಿಷಯದ ಆಳ ಜ್ಞಾನ ಇರಬೇಕು.
* ಇರುವ ಹುದ್ದೆಗೆ ತಕ್ಕಷ್ಟಾದರೂ ಅರ್ಹತೆ ಇರಬೇಕು.
* ಇತರೆ ಎಲ್ಲಾ ವಿಷಯದ ಜ್ಞಾನ ಇರಬೇಕು.
* ಗೊತ್ತಿಲ್ಲದ ವಿಷಯವನ್ನು ನಾಳೆ ತಿಳಿದು ಹೇಳುತ್ತೇನೆ ಎಂದು ಹೇಳಿ ನಡೆದುಕೊಳ್ಳಬೇಕು.
* ಮಾತಿಗೆ ತಕ್ಕನಾಗೆ ನಡೆಯಬೇಕು.
* ಶಿಕ್ಷಕನಿಗೆ ಕಾರ್ಯ ವ್ಯಾಪ್ತಿಯ ಪರಿದಿ ಇಲ್ಲ.
* ವೈಯಕ್ತಿಕ ಜೀವನ ಅಂತ ಬೇರೋಂದು ಇಲ್ಲ.
* ಒಂದು ತಾಸು ಪಾಠ ಮಾಡಲು, ಕನಿಷ್ಠ 2 ತಾಸು ಪಾಠ ಯೋಜನೆ ರೂಪಿಸಿಕೊಳ್ಳಬೇಕು.
* ಮಕ್ಕಳ ಕಣ್ಣಲ್ಲಿ ಕನಸ್ಸುಗಳ ಬೀಜ ತುಂಬ ಬೇಕು.
* ಮಾರ್ಗದರ್ಶನ ಮಾಡಬೇಕು.
* ತನ್ನದಾಗಿರುವ ಎಲ್ಲಾ ಜ್ಞಾನ ದಾರೆಯಳೆಯಬೇಕು.
* ನಿನ್ನನ್ನು ನೋಡಿದರೆ ಮನಸ್ಸು ತಂಪಾಗಬೇಕು, ಹೃದಯ ಬೆಚ್ಚಾಗಾಗ ಬೇಕು.
* ನಿನ್ನ ನೋಡುವ ಪ್ರತಿ ವಿದ್ಯಾರ್ಥಿ ಅಡ್ಡಗಟ್ಟಿ ಬಂದು ನಮಸ್ಕಾರ ಹೇಳುವಂತಿರಬೇಕು.
* ನಿನ್ನೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವಷ್ಟು ನಂಬಿಕೆ ಗಳಿಸಿರಬೇಕು.
* ನೀ ಮೆಂಟರ್ ಆಗಿರಬೇಕು.
* ಕೇವಲ ಪಾಠ ಅಲ್ಲದೇ ಜೀವನದ ಅಂಕು ಡೊಂಕುಗಳ ಕೊರೆ ತಿದ್ದುವ ವ್ಯಕ್ತಿ ನೀನಾಗಬೇಕು.
* ವಿದ್ಯಾರ್ಥಿ ಅನುತ್ತಿರ್ಣಕ್ಕೆ ಕಾರಣ ನಾನು ಎಂದು ಒಪ್ಪಿಕೊಳ್ಳುವ ಮನೋಭಾವ ಇರಬೇಕು.
* ಮಕ್ಕಳ ಸರ್ವತೋಮುಖ ಬೇಳವಣಿಗೆ ನಿನ್ನಿಂದಾಗಬೇಕು.
* ಮಿಸ್ ಹೇಳಿದ ಮಾತು ಮಕ್ಕಳ ಯಂದು ಮಿಸ್ ಮಾಡದೇ ಇರೋಹಾಗೆ ಉಳಿಸಿಕೊಳ್ಳಬೇಕು.
* ಬೇರೆ ವಿಷಯದ ಶಿಕ್ಷಕ/ಕಿಗೆ ಅಷ್ಟೆ ಗೌರವಿಸಬೇಕು ಸ್ಪಂದಿಸಬೇಕು.
* ನಿನ್ನ ಜೇಬಲ್ಲಿ ಕೆಂಪು ಇಂಕಿನ ಪೆನ್ ಕಡ್ಡಾಯವಾಗಿರಬೇಕು.
* ನಿನ್ನ ಜೀವನ ಶೈಲಿ ಮಕ್ಕಳ ಮೇಲೆ ಪರಿಣಾಮ ಬೀಳಬೇಕು.
* ಮಾತಿನ ಕೌಶಲ್ಯ ಅತ್ಯುತ್ತಮವಾಗಿರಬೇಕು.
* ಉತ್ತಮ ಕಲೆಗಾರ ನಾಗಿರಬೇಕು.
* ಅಂತರಾವಲೋಕನ ಆಗಾಗ ಮಾಡಿಕೊಳ್ಳಬೇಕು.
* ನಿನ್ನನ್ನು ನೀ ಪರೀಕ್ಷಿಸಿಕೊಳ್ಳುತ್ತಿರಬೇಕು.
* ಸದಾ ಒದುವ ಹವ್ಯಸ ಇರಬೇಕು
* ಸಂಸ್ಕೃತಿ ಮತ್ತು ಸಂಸ್ಕಾರ ಪಾಲಿಸಿ ಕಲಿಸಬೇಕು.
* ಅತ್ಯುತ್ತಮವಾಗಿ ಬರೆಯುವ ಕೌಶಲ್ಯ ಇರಬೇಕು.
* ಅಭಿನಯ, ಚಿತ್ರಕಲೆ, ಸಂಗೀತ, ವಾಗ್ಮಿ,
* ನೋಟ ಅರ್ಥಪೂರ್ಣವಾಗಿರಬೇಕು.
* ಎಲ್ಲಿ ಹೇಗೆ ಮಾತಾಡಬೇಕು ಎಂದು ಬಲ್ಲವನಾಗಿರಬೇಕು.
* ಕ್ರಿಯಾಶೀಲನಾಗಿರಬೇಕು.
* ಮುಂಗೋಪಿ ಆಗಿರಬಾರದು.
* ಸದಾ ಹಸನ್ಮುಖಿಯಾಗಿರಬೇಕು.
* ಮಾತಿನಲ್ಲಿ ಗಾದೆಗಳನ್ನು ಬಳಸುತ್ತಿರಬೇಕು.
* ಹಲವಾರು ಉದಾಹರಣೆ ಮೂಲಕ ಪಾಠ ಮಾಡುವಂತಿರಬೇಕು.
* ಮುಂದಿರುವ ವಿದ್ಯಾರ್ಥಿ ಎಲ್ಲಾ ಭಾಷೆ ಬಲ್ಲವ ಮತ್ತು ಮಾತನಾಡುತ್ತಿರಬೇಕು.
* ಎಲ್ಲಾ ಭಾಷೆ ಗೊತ್ತಿರಬೇಕು ಆದರೆ ಮಾತೃಭಾಷೆ ಮರಿಬಾರದು.
* ಸಾಮಾನ್ಯ ಜ್ಞಾನ ಇರಬೇಕು.
* ಪ್ರಚಲಿತ ಜ್ಞಾನ ಘಟನೆಗಳ ಬಗ್ಗೆ ತಿಳಿದಿರಬೇಕು.
* ಉದ್ದೇಶ ಪೂರ್ವಕ ಶಿಕ್ಷೆ ನೀಡಬಾರದು.
* ನ್ಯಾಯ ಬದ್ಧನಾಗಿರಬೇಕು.
* ಸಹಿಷ್ಣತೆ ಭಾವೈಕ್ಯತೆ ಮೈಗೂಡಿಸಿಕೊಂಡಿರಬೇಕು.
* ಗಟ್ಟಿ ಓದು, ಮೆಲ್ಲಗೆ ಓದು, ಬಾಯಿದೆರೆದು ಓದು ಮತ್ತು ಮನದಲ್ಲಿ ಓದ್ಕೊ ಬಗ್ಗೆ ತಿಳಿದಿರಬೇಕು.
* ಏಕಾಗ್ರತೆ ಸಾಧಿಸಿರಬೇಕು ಮಕ್ಕಳಿಗೆ ಉಣಬಡಿಸಬೇಕು.
* ಕ್ರೀಡಾ ಮನೋಭಾವ ಇರಬೇಕು.
* ಪ್ರೋತ್ಸಾಹ ಗುಣ ಇರಬೇಕು.
* ಮಕ್ಕಳ ಪೂರ್ವಗ್ರಹ ಪೀಡಿತನಾಗಿರಬಾರದು.
* ವೈಯಕ್ತಿಕವಾಗಿ ನಿಂದಿಸಬಾರದು.
* ಜೀವನ ಕೌಶಲ್ಯ ತರಬೇತಿದಾರನಾಗಿರಬೇಕು.
* ಪಕ್ಷ, ಜಾತಿ, ಮತ, ಪಂಥ, ಧರ್ಮಗಳ ಬಗ್ಗೆ ಗೊತ್ತಿರಬೇಕೆ ವಿನಃ ಒಂದರ ಕಡೆ ಇರಬಾರದು.
* ದೂರ ದೃಷ್ಟಿಕೋನ ಇರಬೇಕು.
* ಗೌರವಿಸುವ ವಸ್ತ್ರಗಳನ್ನು ಧರಿಸಿರಬೇಕು.
* ತಪ್ಪಿ ಶಿಕ್ಷೆ, ಸಾಧನೆಗೆ ಪ್ರೋತ್ಸಾಹ ನೀಡುವಂತಿರಬೇಕು.
* ಸಾಕ್ಷಿಗಳಿಲ್ಲದೆ ಒಪ್ಪಿಕೊಳ್ಳಬಾರದು.
* ಕಾರಣ ಹುಡುಕಬಾರದು ಅದನ್ನೆ ಹೇಳಿಕೊಳ್ಳಬಾರದು.
* ತಾಳ್ಮೆ ವಹಿಸಬೇಕು.
* ತರಗತಿ ನಿರ್ವಹಣೆ ಅನುಭವ ಗಳಿಸಿಕೊಂಡಿರಬೇಕು.
* ಮಕ್ಕಳಿಗಾಗಿ ಸಮಯ ಕೊಡಬೇಕು.
* ಸ್ವತಃ ತಂದೆ ತಾಯಿಯರನ್ನು ನೋಡಿಕೊಳ್ಳುತ್ತಿರಬೇಕು.
* ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಅಲೋಚಿಸುತ್ತಿರಬೇಕು.
* ದುಶ್ಚಟ, ದುಸ್ಸಹಾಸಕ್ಕೆ ಕೈ ಹಾಕಿರಬಾರದು.
* ದುಷ್ಟರ ಸಹವಾಸ ಮಾಡಿರಬಾರದು.
* ನಿನಗೆ ಡ್ಯುಟಿ ಸಮಯ ಅಂತ ಇಲ್ಲ ನೀ ಮಲಗಿದಾಗೂ ನೋಡಿದ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀಳುತ್ತದೆ.
* ಪರಿಣಾಮಕಾರಿ ಭೋದನೆ ಮಾಡುವಂತಿರಬೇಕು.
* ಶಹಬ್ಬಾಶ್ ಗಿರಿ ನೀಡಿ ಮೆಲೆತ್ತಬೇಕು.
* ಸಕಲಕಲಾ ವಲ್ಲಭನಾಗಿರಬೇಕು.
* ಸಮಾಜಮುಖಿಯಾಗಿರಬೇಕು.
* ದೇಶ ಪ್ರೇಮ ಹೊತ್ತುಕೊಂಡಿರಬೇಕು.
* ಕಡಿಮೆ ಸಮಯದಲ್ಲಿ ಸರಿಯಾದ ತೀರ್ಮಾನ ಮಾಡುವ ಕೌಶಲ್ಯ ಇರಬೇಕು.
* ಶಬ್ದ ಸಂಪತ್ತು ಇರಬೇಕು.
* ಸ್ಪಷ್ಟವಾದ ಉಚ್ಚರಣೆ ಇರಬೇಕು.
* ವ್ಯಾಕರಣ ಬದ್ದತೆ ಇರಬೇಕು.
* ಸೋಶಿಯಲ್ ಮಿಡಿಯದ ಮಾಹಿತಿ ಇರಬೇಕು.
* ಮುಖ್ಯೋಪಾಧ್ಯಾಯ/ಪ್ರಾಚಾರ್ಯರರ ಜೊತೆಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿರಬೇಕು.
* ಬೇರೆ ಶಾಲೆ/ಕಾಲೇಜುಗಳ ತಮ್ಮ ವಿಷಯದ ಶಿಕ್ಷಕ/ಕಿ ಉಪನ್ಯಾಸಕ/ಕಿಯರ ಜೊತೆಗೆ ಸಂಪರ್ಕದಲ್ಲಿರಬೇಕು.
* ಇಲಾಖೆಯ ನೋಟಿಸ್ ಬಗ್ಗೆ ತಿಳಿದುಕೊಳ್ಳುತ್ತಿರಬೇಕು.
* ಶಾಲಾ ನಿಮಯಗಳನ್ನು ಚಾಚು ತಪ್ಪದೆ ಪಾಲಿಸಿ ಮಕ್ಕಳಿಗೂ ಪಾಲಿಸುವ ಹಾಗೆ ನೊಡಿಕೊಳ್ಳಬೇಕು.
* ವಿದ್ಯಾರ್ಥಿಗಳಿಗೆ ಅಭಿಪ್ರೇರಣೆ ಮಾಡಿ ಸ್ಫೂರ್ತಿಗೊಳಿಸುವಂತಿರಬೇಕು.
* ಪಾಠದಲ್ಲಿ ಕಥೆ, ಕವನ, ಅಭಿನಯ, ಹಾಸ್ಯ, ಹಾಡು, ಮಿಮಿಕ್ರಿ, ಇನ್ನಿತರೆ ಕಲೆಯ ಅಡಕವಿರಬೇಕು.
* ಪರೀಕ್ಷಾ ಮೌಲ್ಯಮಾಪನದಲ್ಲಿ ನ್ಯಾಯ ಒದಗಿಸುವಂತಿರಬೇಕು.
* ತಾವೇ ಮೊಬೈಲ್ ಅಡಿಕ್ಷನ್ ನಲ್ಲಿ ಸಿಲುಕಿರಬಾರದು.
* ತಾವೇ ಖಿನ್ನತೆಗೆ ಒಳಗಾಗಿರಬಾರದು.
* ಕರ್ತವ್ಯಕ್ಕೆ ಬದ್ಧರಾಗಿರಬೇಕು.
* ಪಾಠ ಮಾಡಿದ ನಂತರ ಪಾಠಯೋಜನೆ ಮತ್ತೊಮ್ಮೆ ಬಳಸಬಾರದು.
* ಅವಶ್ಯಕತೆಗೆ ತಕ್ಕಷ್ಟು ಮಾತ್ರ ರಜೆಗಳನ್ನು ಬಳಸಬೇಕು.
* ಪಾಠಕ್ಕೆ ಹೊಗುವಾಗ ಛಲ, ಸ್ಫೂರ್ತಿ, ಸಂತೋಷ, ಹುರಿದುಂಬಿಯಿಂದ ಕೊಂಡು ಹೋಗಬೇಕು.
* ಪಾಠ ಮಾಡಲು ಮಕ್ಕಳು ಕರಿಯೊಕ್ಕಿಂತ ಮುಂಚೆ ತರಗತಿಯಲ್ಲಿರಬೇಕು.
* ಮಕ್ಕಳಿಗೆ ಕೇಳಿದ ಪ್ರಶ್ನೆಗನ್ನು ಉತ್ತರ ಬಾರದಿದ್ದರೆ ನಿವೇ ಹೇಲಬೇಕು.
* * ಮಕ್ಕಳ ಬೌದ್ಧಿಕ ಮಟ್ಟ ಅಳತೆ ಮಾಡಿ ಅವರಿಗೆ ನಿಲಕುವ ಹಂತದಲ್ಲಿ ಪಾಠ ಮಾಡಬೇಕು.
* ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಕಾಳಜಿ ಬಹಿಸಿ ಪ್ರಭದ್ದರನ್ನಾಗಿಸಬೇಕು.
* ಕಲಿಕೆಯಲ್ಲಿ ಮುಂದಿರುವ ಮಕ್ಕಳ ಜೊತೆ ಹಿಂದುಳಿದ ಮಕ್ಕಳ ಬಗ್ಗೆ ಅಸ್ಸಯ್ಯವಾಗಿ ನಿಂದಿಸುವುದು ಮತ್ತು ಹೊಲಿಸಿ ಮಾತಾಡುವುದು ಮಾಡಬಾರದು.
* ಅವಾಚ್ಚ ಶಬ್ದಗಳ ಬಳಕೆ ಮತ್ತು ಸಿಟ್ಟು ವಿಕೊಪದಲ್ಲಿ ಇರಬಾರದು.
* ತಪ್ಪು ಮಾಡಿದ ಮಗು/ವಿದ್ಯಾರ್ಥಿಯು ಬಗ್ಗೆ ಎಲ್ಲೂ ಹೇಳಿಕೊಳ್ಳದೇ ತಾವೇ ತಿದ್ದಿ ಸರಿದಾರಿಗೆ ತರುವುದು.
* ಮಕ್ಕಳ ವೈಯಕ್ತಿಕ ಬದುಕಿನ ಬಗ್ಗೆ ಕಾಳಜಿವಹಿಸಿ ಮಾರ್ಗದರ್ಶನ ಮಾಡಬೇಕು.
* ಪ್ರಶ್ನೆಗಳನ್ನು ಕೇಳಿ ತಕ್ಕ ಉತ್ತರ ಪಡೆಯುವ ಹಾಗೆ ಪಾಠ ಇರಬೇಕು.
* ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕಿಂತ ಸ್ವಾತಂತ್ರ್ಯವಾಗಿ ಕಲಿಸುವುದು ಉತ್ತಮ.
* ಕಂಠಪಾಟಕ್ಕೆ ಒತ್ತುಕೊಡದೇ ಬೌದ್ಧಿಕ ಮಸ್ತಕ ಅಭಿವೃದ್ಧಿಗೆ ಅವಕಾಶ ಕಲ್ಪಿಸಿಕೊಡುವುದು.
* ಕಂಪ್ಯೂಟರ್ ತರಬೇತಿ ಪಡೆದುಕೊಂಡಿರಬೇಕು.
* ಇಲ್ಲ, ಆಗಲ್ಲ, ಗೊತ್ತಿಲ್ಲ, ಸಂಬಂಧ ಇಲ್ಲ ಎಂಬ ಶಬ್ದಗಳು ಬಳಸದೇ ವಾತವರಣ ಸೃಷ್ಟಿಸಿಕೊಡುವುದು.
* ಪದವಿ, ಪ್ರಮಾಣ ಪತ್ರಗಳಿಂದ ಪಾಠ ಮಾಡಬಹುದು ಎಂಬ ಭ್ರಮೆಯಿಂದ ಹೊರ ಬಂದು ಅನುಭವ, ಆಸಕ್ತಿ, ಕೌಶಲ್ಯ ದಿಂದ ಕರ್ತವ್ಯ ನಂಬಿಕೆ ಇರಬೇಕು.
* ಕರ್ತವ್ಯಲೋಪ ವಾಗದಂತೆ ಎಚ್ಚರ ವಹಿಸುತ್ತಿರಬೇಕು.
* ತನ್ನ ಚೌಕಟ್ಟು, ಇತಿ ಮಿತಿ, ವ್ಯಾಪ್ತಿ ಮೀರದಂತೆ ನೊಡಿಕೊಳ್ಳುತ್ತಿರಬೇಕು.
* ವಿದ್ಯಾರ್ಥಿಯ ನಿಜವಾದ ಗುರು ನಾನಗಿರಬೇಕು.

ಬರಹ
ಮಹಿಬೂಬ್ ಮದ್ಲಾಪುರ
ಸಂಪನ್ಮೂಲ ವ್ಯಕ್ತಿಗಳು ಮಾನ್ವಿ



# ಅಪೌಷ್ಠಿಕ ಮಕ್ಕಳ ತ್ವರಿತ ಪತ್ತೆ, ಚಿಕಿತ್ಸೆಯಿಂದ ಅವರ ಆಯುಷ್ಯ ಹೆಚ್ಚಳ: ಡಾ.ಗಫುರ್

**ಕಲಬುರಗಿ,ಸೆ.26–**ರಾಷ್ಟ್ರೀಯ ಬಾಲ ಸ್ವಸ್ಥ್ಯ ಕಾರ್ಯಕ್ರಮ ಜನನದಿಂದ ಹಿಡಿದು 18 ವರ್ಷ ವಯಸ್ಸಿನ ಮಕ್ಕಳನ್ನು ( ಜನನದ ದೋಷಗಳು, ರೋಗಗಳು, ಕೊರತೆಗಳು ಮತ್ತು ವಿಕಸನ ವಿಳಂಬಗಳು ಸೇರಿದಂತೆ ಅಂಗವಿಕಲತೆಗಳು ) ಅನ್ನು ತ್ವರಿತವಾಗಿ ಗುರುತಿಸಿ ಚಿಕಿತ್ಸೆ ನೀಡಲು ಮತ್ತು ಅವರ ಸಮಗ್ರ ಆರೈಕೆಗಾಗಿ ಭಾರತದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಜಾರಿಯಾಗಿರುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದ ಉದ್ದೇಶ ಮಕ್ಕಳ ಆರೋಗ್ಯವನ್ನು ಸುಧಾರಿಸಿ, ತ್ವರಿತ ಪತ್ತೆ ಮತ್ತು ಚಿಕಿತ್ಸೆ ಮೂಲಕ ಅವರ ಆಯುಷ್ಯದ ಗುಣಮಟ್ಟವನ್ನು ಹೆಚ್ಚಿಸುವದು. ಮಕ್ಕಳನ್ನು ವರ್ಷಕ್ಕೆ ಎರಡು ಬಾರಿ ಅಂಗನವಾಡಿಗಳಲ್ಲಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ತಪಾಸಣೆಯಲ್ಲಿ ಮೊದಲು ಗುರುತಿಸಿದ ಮಕ್ಕಳಿಗೆ ಉಚಿತ ಚಿಕಿತ್ಸೆಯೊಂದಿಗೆ ತಲುಪಿಸಲಾಗುತ್ತದೆ. ನ್ಯೂನ್ಯತೆ ಇರವ ಮಕ್ಕಳನ್ನು ಗುರುತಿಸಿ ಚಿಕಿತ್ಸೆ ನೀಡಿ ಎಂದು ಚಿಂಚೋಳ್ಳಿ ತಾಲೂಕು ಅರೋಗ್ಯಧಿಕಾ ರಿಗಳು ಡಾ. ಮಹಮ್ಮದ್ ಡಿ.ಗಫುರ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರ್‌ಸಿಹೆಚ್ ಕಾರ್ಯಾಲಯ ಹಾಗೂ ರಾಷ್ಟ್ರೀಯ ಬಾಲ ಸ್ವಸ್ಥ್ಯ ಕಾರ್ಯಕ್ರಮ, ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಾಲಯ ಚಂದಾಪುರ ಚಿಂಚೋಳ್ಳಿ, ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಬಾಲ ಸ್ವಸ್ಥ್ಯ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಈ ಆರೋಗ್ಯ ತಪಾಸಣೆ ಜನನದ ದೋಷ, ರೋಗ, ಕೊರತೆ, ಮತ್ತು ವಿಕಸನ ವಿಳಂಬಗಳನ್ನು ತ್ವರಿತವಾಗಿ ಗುರುತಿಸುತ್ತದೆ ಉಚಿತ ಶಸ್ತ್ರಚಿಕಿತ್ಸೆ ಸೇರಿದಂತೆ ಚಿಕಿತ್ಸೆ ನೀಡುತ್ತದೆ, ಮಕ್ಕಳ ಸಾಧಾರಣ ಆರೋಗ್ಯದ ಸುಧಾರಣೆಯ ಉದ್ದೇಶವನ್ನು ಹೊಂದಿದೆ ಈ ಕಾರ್ಯಕ್ರಮ ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಆರೋಗ್ಯ ಇಲಾಖೆಯ ಜಂಟಿ ಪ್ರಕ್ರಿಯೆಯಲ್ಲಿ ಜಾರಿಯಾಗಿದ್ದು, ಮಕ್ಕಳ ಆರೋಗ್ಯ ಕಾಯ್ದುಕೊಳ್ಳಲು ಅತ್ಯಂತ ಮಹತ್ವದ ಯೋಜನೆಯಾಗಿದೆ . ಗ್ರಾಮೀಣ ಜನರು ದೂರದ ಊರಿಗೆ ಹೋಗುವ ಮುಂಚೆ ನಮ್ಮ ನಮ್ಮ ತಾಲೂಕು ಆಸ್ಪತ್ರೆ ಯಲ್ಲಿ ಚಿಕಿತ್ಸೆಗೆ ಮುಂಚೆ ತಪಾಸಣೆಗೆ ಒಳಗಾಗಬೇಕು ಎಂದು ಸಲಹೆ ನೀಡಿದರು.

ನಂತರ ವೇದಿಕೆ ಮೇಲೆ ಜಿಲ್ಲಾ ಡಿಈಐಸಿ ವ್ಯವಸ್ಥಾಪಕ ಕೃಷ್ಣ



ಎಸ್. ವಗ್ಗೆ ಪ್ರಾಸ್ತಾವಿಕವಾಗಿ ಮಾತನಾಡುತ್ತ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಮತ್ತು ಶಾಲೆ ಮಕ್ಕಳಿಗೆ ತಾಲೂಕು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ ಬಿಎಸ್‌ಕೆ ತಂಡದವರು ಗುರುಜಿಸಿದ ಮಕ್ಕಳಿಗೆ ತಾಲೂಕಿನಲ್ಲಿ ಉಚಿತ ಆರೋಗ್ಯ ತಪಾಸನೆ ಮಾಡುಲು ಉದ್ದೇಶಿಸಲಾಗಿದ್ದು ಅದರಂತೆ ಈಗಾಗಲೇ ಆರ್‌ಬಿಎಸ್ ಕೆ ಕಾರ್ಯಕ್ರಮದಲ್ಲಿ ಉಚಿತವಾಗಿ ಸೀಳು ತುಟಿ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗೆ ಆಪರೇಷನ್ ಮಾಡಿಸಿ ಕೊಡಲಾಗಿದೆ. ಇನ್ನು ಮುಂದೆ ಆರ್‌ಬಿಎಸ್‌ಕೆ ತಂಡದವರು. ಡಿಈಐಸಿ ವ್ಯವಸ್ಥಾಪಕರು ಇರುತ್ತಾರೆ ಮಕ್ಕಳಲ್ಲಿ ಯಾವುದೇ ನ್ಯೂನ್ಯತೆಗಳು ಇದ್ದರೂ ಹೆದರಬೇಕಾಗಿಲ್ಲ ಮತ್ತು ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಡುತ್ತೇವೆ ಎಂದು ಹೇಳಿದರು.

ವೇದಿಕೆ ಮೇಲೆ ಪ್ರಮುಖರಾದಂತ ಮಕ್ಕಳ ತಜ್ಞರು ಡಾ.ರಾಜೇಶ್, ಡಾ. ಮಜಸಿರ್, ಡಾ ಈಶ್ವರ್, ಡಾ ಉಮಾಶಂಕರ, ಆರ್ ಬಿ ಎಸ್ ಕೆ ತಂಡದ ವೈದ್ಯಾಧಿಕರಿಗಳಾದ ಡಾ. ಪ್ರಕಾಶ್, ಡಾ. ಅಭಿಷೇಕ್, ಡಾ. ಫೈಯೋಜ್ ಮತ್ತು ನೇತ್ರ ಸಹಾಯಕರಾದ ಯಠಕೋಬಾ, ಮೊಹಮದ್ ಆಸೀಫ್, ಆರ್ ಕೆ ಎಸ್ ಕೆ. ಸಮಾಲೋಚಕರಾದ ಮೊಗಲಪ್ಪ , ಶ್ರೀಶೈಲ್ ಹಿರೇಮಠ, ಶಿಕ್ಷಣ ಇಲಾಖೆಯ ಬಿ ಐ ಈ ಆರ್ ಟಿ ನಿಸಾರ್ ಅಹ್ಮದ್, ಭಾರತಿ, ಶಿವರಾಂ ರಾಥೋಡ್, ಮಶಕ್ ಹಾಗೂ ಅಂಗನವಾಡಿ ಕೇಂದ್ರದ ಕಾರ್ಯಕರ್ತರು ಪಾಲುಗೊಂಡು ಫಲಾನುಭಾವಿಗಳು ಲಾಭ ಪಡೆದುಕೊಂಡು ಶಿಬಿರವನ್ನು ಯಶಸ್ವಿಗೊಳಿಸಿದರು.

# ಎಸ್.ಎಲ್.ಬೈರಪ್ಪ ಪಂಚಭೂತಗಳಲ್ಲಿ ಲೀನ

**ಮೈಸೂರು,ಸೆ.26–** ಮೊನ್ನೆ ನಿಧನರಾದ ನಾಡಿನ ಖ್ಯಾತ ಸಾಹಿತಿ, ಪದ್ಮಭೂಷಣ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಎಸ್.ಎಲ್ ಭೈರಪ್ಪ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವದೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಿತು.

ಬೆಳಿಗ್ಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸಾಹಿತಿ ಎಸ್.ಎಲ್ ಭೈರಪ್ಪನವರ ಅಂತ್ಯಕ್ರಿಯೆ ಬ್ರಾಹ್ಮಣ ಸಂಪ್ರದಾಯದಂತೆ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿತು. ಎಸ್.ಎಲ್ ಭೈರಪ್ಪ ಅವರ ಚಿತೆಗೆ ಪುತ್ರರು ಲೇಖಕಿ ಸಹನಾ ವಿಜಯ್ ಕುಮಾರ್ ಅಗ್ನಿಸ್ಪರ್ಶ ಮಾಡಿದರು.

ಬುಧವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದ ಸಾಹಿತಿ ಎಸ್.ಎಲ್ ಭೈರಪ್ಪ ಅವರ ಪಾರ್ಥೀವ ಶರೀರವನ್ನ ನಿನ್ನೆ ಮಧ್ಯಾಹ್ನ ಮೈಸೂರಿಗೆ ತಂದು ಸಂಜೆವರೆಗೆ ಕಲಾಮಂದಿರದ ಆವರಣದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು.



ಕೊನೆಕಾಲದಲ್ಲಿ ಭೈರಪ್ಪನವರ ಯೋಗಕ್ಷೇಮ ನೊಡಿಕೊಂಡಿದ್ದ ಸಹನಾ ವಿಜಯ್ ಕುಮಾರ್ ಅವರು ಭೈರಪ್ಪ ಅಂತ್ಯಕ್ರಿಯೆ ಸ್ಥಳಕ್ಕೆ ಆಗಮಿಸಿ ಅಂತಿಮ ದರ್ಶನ ಪಡೆದರು.

ಈ ವೇಳೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಚಿವ ಹೆಚ್.ಸಿ ಮಹದೇವಪ್ಪ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೇರಿ ಶಾಸಕರುಗಳು ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

# ಪ್ರವಾಹ: ಗಂಜಿ ಕೇಂದ್ರಕ್ಕೆ ತಹಶೀಲ್ದಾರ್ ಭೇಟಿ

**ವಾಡಿ,ಸೆ.26–**ಚಿತ್ತಾಪುರ ತಾಲ್ಲೂಕಿನಲ್ಲಿ ನದಿಗಳು ಉಕ್ಕಿ ಹರಿಯುತಿದರಿಂದ ನದಿ ಪಕ್ಕದ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ ನಾಗಯ್ಯ ಹಿರೇಮತ್ ಅವರು ಕಾಳಜಿ ಕೇಂದ್ರ ಹಾಗೂ ಗಂಜಿ ಕೇಂದ್ರಕ್ಕೆ ಭೇಟಿ ನೀಡಿ ಜನರಿಗೆ ಇರಲು ಸಕಲ ಸಿದ್ದತೆ ಮಾಡಿ ಜನರಿಗೆ ಯಾವುದೇ ಸಮಸ್ಯೆ ಆಗದಂತೆ ನಿಗಾ ವಹಿಸಲು ಸಿಬ್ಬಂದಿಗೆ ಸೂಚಿಸಿದರು.

ನಂತರ ಅವರು ಸನ್ನತಿ, ಕೊಲ್ಲೂರ, ಚಾಮನೂರ್, ಕುಂದನೂರ್ ಗ್ರಾಮಕ್ಕೆ ಭೇಟಿ ನೀಡಿದರು. ತಾಲ್ಲೂಕ ಪಂಚಾಯತ್ ಸಹಾಯಕ ನಿರ್ದೇಶಕ ಪಂಡಿತ ಶಿಂಥೆ, ನಾಲವಾರ ಕಂದಾಯ ನೀರಿಕ್ಷಕ ಪ್ರಶಾಂತ್ ರಾಠೋಡ್, ಗ್ರಾಮ ಲೇಖಕ ಸುನಿಲ್ ಚವ್ಹಾಣ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಯುವ ಮಾರ್ಗ

ಶನಿವಾರ : 27–09–2025

# ನನ್ನ ಕ್ಷೇತ್ರದ ಜನರೇ ನನ್ನ ಶಕ್ತಿ: ಶಾಸಕ ಲಕ್ಷ್ಮಣ ಸವದಿ



**ಅಥಣಿ,ಸೆ.26–** ರೈತರ ಮಕ್ಕಳಿಗೆ ಉತ್ತಮ ಶಿಕ್ಷಣದ ಅಗತ್ಯವಿದೆ. ರೈತನ ಮಕ್ಕಳು ವೈದ್ಯರಾಗಬೇಕು. ರೈತನ ಮಕ್ಕಳು ಕೃಷಿ ಪಂಡಿತರಾಗಬೇಕು. ಈ ಹಿನ್ನೆಲೆಯಲ್ಲಿ ಕೊಕಟನೂರ ಗ್ರಾಮದಲ್ಲಿ ಈಗಾಗಲೇ ಪಶು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಮಾಡಲಾಗಿದೆ. ಅದರಂತೆ ರೈತರ ಮಕ್ಕಳು ಸುಧಾರಿತ ಕೃಷಿ ಪದ್ಧತಿ ಕೈಗೊಂಡು ವ್ಯವಸಾಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಿನ ವರ್ಷ ಅಥಣಿಯಲ್ಲಿ ಕೃಷಿ ಕಾಲೇಜು ಸ್ಥಾಪನೆಗೆ ಸಿಎಂ ಅವರಿಂದ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗುವುದು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಭರವಸೆ ನೀಡಿದರು.ಅವರು ತಾಲೂಕಿನ ನಾಗನೂರ ಪಿಕೆ ಗ್ರಾಮದಲ್ಲಿ ಶ್ರೀ ಲಕ್ಷ್ಮಿದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡ ದಸರಾ ಉತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯದ ನಂತರದಿಂದಲೂ ಅಥಣಿ ತಾಲೂಕಿಗೆ ಯಾವುದೇ ಮೂಲಭೂತ ಸೌಲಭ್ಯಗಳು ಸರಿಯಾಗಿ ಸಿಗುತ್ತಿರಲಿಲ್ಲ. ಒಂದು ಸರ್ಕಾರಿ ಪ್ರೌಢಶಾಲೆ ಇರಲಿಲ್ಲ ಸರ್ಕಾರಿ ಪಿಯು ಕಾಲೇಜ್ ಇರಲಿಲ್ಲ. ಸರ್ಕಾರಿ ಡಿಗ್ರಿ ಕಾಲೇಜ್ ಇರಲಿಲ್ಲ. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ಇರಲಿಲ್ಲ. ಬಡ ಮಕ್ಕಳಿಗೆ ಶೈಕ್ಷಣಿಕವಾಗಿ ಸರ್ಕಾರಿ ಸೌಲಭ್ಯಗಳು ಕೂಡಾ ಸಿಗುತ್ತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ ನನ್ನ ಕ್ಷೇತ್ರದ ಬಡ ಮಕ್ಕಳು. ರೈತರ ಮಕ್ಕಳು ಶಿಕ್ಷಣಕ್ಕಾಗಿ ಬೇರೆ ಊರುಗಳಿಗೆ ಬೇರೆ ಜಿಲ್ಲೆಗಳಿಗೆ ಬೇರೆ ತಾಲೂಕುಗಳಿಗೆ ಹೋಗಬಾರದು. ಆ ಮಕ್ಕಳು ಇಲ್ಲಿಯೇ ಉತ್ತಮ ಹಾಗೂ ಉನ್ನತ ಶಿಕ್ಷಣ ಪಡೆಯಲು ಜಿಲ್ಲಾ ಮಟ್ಟದಲ್ಲಿರುವ. ಶಾಲೆ ಕಾಲೇಜುಗಳನ್ನು ನನ್ನ ಕ್ಷೇತ್ರದಲ್ಲಿ ಪ್ರಾರಂಭಿಸಿ ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕೆಂಬ ಸಂಕಲ್ಪವನ್ನು ಹೊಂದಿದ್ದೇನೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ನಾನು ರಾಜಕೀಯ ಮೆಟ್ಟಿಲು ಹತ್ತುವ ಸಂದರ್ಭದಲ್ಲಿ ಅಂದರೆ 1999ರ ಪೂರ್ವದಲ್ಲಿ ಅಥಣಿ ಬರಗಾಲ ಪೀಡಿತ ಕ್ಷೇತ್ರ ಎಂದು ಪ್ರಸಿದ್ಧಿ ಪಡೆದಿತ್ತು. ರೈಲ್ವೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸುವ ಪರಿಸ್ಥಿತಿ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ನನ್ನ ತಾಲೂಕಿನ ಜನರಿಗೆ ಕೃಷ್ಣಾ ನದಿಯಿಂದ ಶುದ್ಧ ಕುಡಿಯುವ ನೀರು ಪೂರೈಸುವುದು ನನ್ನ ಮೊದಲ ಆದ್ಯತೆಯಾಗಿದ್ದು. ಕ್ಷೇತ್ರದ 68 ಹಳ್ಳಿಗಳಿಗೆ ಅತ್ಯಂತ ಶುದ್ಧ ಕುಡಿಯುವ ನೀರು ಪೂರೈಸುವ ಯಾವುದಾದರೂ ಕ್ಷೇತ್ರ ಇದ್ದರೆ ಅದು ಅಥಣಿ ಮತಕ್ಷೇತ್ರ ಎಂದು ಹೇಳಲು ಸಂತೋಷ ಎನಿಸುತ್ತದೆ ಎಂದು ಶಾಸಕ ಲಕ್ಷ್ಮಣ ಸವದಿ ಹೆಮ್ಮೆ ವ್ಯಕ್ತಪಡಿಸಿದರು.ರೈತರಿಗಾಗಿ ತಾಲೂಕಿನಲ್ಲಿ ಹಲವಾರು ನೀರಾವರಿ ಯೋಜನೆಗಳು ಪ್ರಾರಂಭವಾಗಿದ್ದರಿಂದ ಈಗ ಅಥಣಿ ತಾಲೂಕು ಬರಿಗಾಲ ಪೀಡಿತ ಹಣೆಪಟ್ಟಿಯಿಂದ ಹೊರಬಂದು ಮತಕ್ಷೇತ್ರ ಹಸಿರಿನಿಂದ ಕಂಗೊಳಿಸುತ್ತಿದೆ. ಈ ನಿಟ್ಟಿನಲ್ಲಿ ಬರುವ ಜನವರಿ 26 ರಂದು ಅಮ್ಮಾಜೀಶ್ವರಿ ಕೊಟ್ಟಲಗಿ ಯಾತ ನೀರಾವರಿ ಯೋಜನೆ ಹಾಗೂ ಬಸವೇಶ್ವರ ಯಾತ ನೀರಾವರಿ ಯೋಜನೆಗಳಿಗೆ ಪ್ರಾಯೋಗಿಕವಾಗಿ ಚಾಲನೆ ನೀಡಲಾಗುವುದು. ಇದರಿಂದ ಸಂಪೂರ್ಣ ಅಥಣಿ ತಾಲೂಕು ನೀರಾವರಿ ಒಳಪಡಲಿದೆ. ಈಗ ಅಥಣಿ ತಾಲೂಕಿನಲ್ಲಿ ರೈತರು ಸುಮಾರು 75 ಲಕ್ಷ ಟನ್ ಕಬ್ಬು ಬೆಳೆಯುತ್ತಿದ್ದಾರೆ ಈ ಎರಡು ಯೋಜನೆಗಳು ಪೂರ್ಣಗೊಂಡರೆ ಸುಮಾರು ಒಂದು ಕೋಟಿ ಟನ್ ಕಬ್ಬು ಬೆಳೆಯುವ ತಾಲೂಕು ಅಥಣಿಯಾಗಲಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ನನ್ನ ರಾಜಕೀಯಕ್ಕೆ ಪದಾರ್ಪಣೆ ಮಾಡಿದಾಗಿನಿಂದ ಹಿಡಿದು ಇಲ್ಲಿಯವರೆಗೆ ನನಗೆ ಪ್ರತಿಯೊಂದು ರಾಜಕೀಯ ಮೆಟ್ಟಿಲು ಹತ್ತಲು ನನಗೆ ಅತ್ಯಂತ ಶಕ್ತಿಯಾಗಿ ನಿಂತಿರುವುದು ನನ್ನ ನಾಗನೂರ ಪಿಕೆ ಗ್ರಾಮ ಕಳೆದ 30 ವರ್ಷಗಳಿಂದ ನನಗೆ ಆಶೀರ್ವಾದ ಮಾಡುತ್ತಾ ಬಂದಿದ್ದಾರೆ ಪ್ರತಿ ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳನ್ನು ಕೊಟ್ಟು ನನ್ನನ್ನು ವಿಜಯಶಾಲಿಯಾಗಿ ಮಾಡಿದ್ದಾರೆ. ನಾನು ರಾಜಕೀಯವಾಗಿ ಏನೇ ನಿರ್ಧಾರ ತೆಗೆದುಕೊಂಡರೂ ನನ್ನ ಬೆನ್ನೆಲುಬಾಗಿ ನನಗೆ ಶಕ್ತಿ ನೀಡಿರುವ ಗ್ರಾಮ ನಾಗನೂರ ಪಿ.ಕೆ. ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಕಲಾವಿದರ ಕಲೆಯನ್ನು ಗುರುತಿಸಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಮಾಜದಲ್ಲಿ ಇಂತಹ ಉತ್ಸವಗಳು ಜಾತ್ರಾ ಮಹೋತ್ಸವಗಳು ನಡೆಯಲಿ. ಇವು ಜನರಲ್ಲಿ ಸಾಂಸ್ಕೃತಿಕ ಹಾಗೂ ಸೌಹಾರ್ದಯುತವಾಗಿ ಮಾನವೀಯ ಸಂಬಂಧಗಳನ್ನು ಬೆಳೆಸುತ್ತವೆ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ. ನಾನು ಯಾವುದೇ ರೀತಿಯ ಸಹಾಯ ಸಹಕಾರಕ್ಕೆ ನಾನು ಸಿದ್ಧನಿದ್ದೇನೆ. ನಾನು ಯಾವತ್ತೂ ನಿಮ್ಮ ಜೊತೆ ಇರುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತೆಲಸಂಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ ಎಂ ಖೊಬ್ರಿ ಕಾಂಗ್ರೆಸ್ ಮುಖಂಡ ಶಿವು ಗುಡ್ಡಾಪೂರ ಮಾತನಾಡಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿಯವರು ತಮ್ಮ ಸರಳ ನಡೆ, ನುಡಿಗಳಿಂದ, ದಾನ, ಸ್ನೇಹ ಗುಣದಿಂದ ರಾಜ್ಯದ ಮುತ್ಸದ್ದಿ ಅಜಾತಶತ್ರು ರಾಜಕಾರಣಿಯಾಗಿದ್ದಾರೆ. ಜನ ಸೇವೆಯೇ ಜನಾರ್ದನ ಸೇವೆ ಎಂದು ಜನಾನುರಾಗಿಯಾಗಿ ಜನಸೇವೆ ಮಾಡುತ್ತಾ ಬಂದಿದ್ದಾರೆ ಅವರು ಅಧಿಕಾರ ಅವಧಿಯಲ್ಲಿ ಅಥಣಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು ಹೆಮ್ಮೆಯ ಅಭಿವೃದ್ಧಿಯ ಸರದಾರ ಆಗಿದ್ದಾರೆ ಎಂದರು.

# ನುಗಡೋಣಿ–ಹೊಸೂರು ಸಹಕಾರಿ ಸಂಘಕ್ಕೆ, 44.97 ಲಕ್ಷ ರೂ.ನಿವ್ವಳ ಲಾಭ :ನೀಲಕಂಠರಾಯಗೌಡ



**ಯುವ ಮಾರ್ಗ ಸುದ್ದಿ**

**ಸಿರವಾರ,ಸೆ.26–**ನಮ್ಮ ರೈತರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಈ ವರ್ಷದಲ್ಲಿ 44,97 ಲಕ್ಷ ರೂಪಾಯಿ ನಿವ್ವಳ ಲಾಭವಾಗಿದೆ ಎಂದು ನುಗಡೋಣಿ–ಹೊಸುರು,ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅದ್ಯಕ್ಷ ನೀಲಕಂಠರಾಯಗೌಡ ಕಾಮರೆಡ್ಡಿ ಹೇಳಿದರು.

ಅವರು ತಾಲೂಕಿನ ಎನ್ ಹೊಸುರು,ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ 2025–26 ನೇ ವಾರ್ಷಿಕ ಮಹಾ ಸಭೆಯ ಅದ್ಯಕ್ಷ ನೀಲಕಂಠ ರಾಯಗೌಡ ಕಾಮರೆಡ್ಡಿ, ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಮಹಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಈ ಹಿಂದೆ ನಮ್ಮ ಸಂಘದಿಂದ ಅನೇಕ ರೈತರಿಗೆ ಗೊಬ್ಬರ, ಬೀಜಗಳನ್ನು ಕಡಿಮೆ ಧರದಲ್ಲಿ ವಿತರಣೆ ಮಾಡಿದೆ, ಕಡಿಮೆ ಬಡ್ಡಿ ದರದಲ್ಲಿ, ಹೆಚ್ಚಿನ ಸಾಲ ಸೌಲಭ್ಯವನ್ನು ನೀಡುವ ಮೂಲಕ ನೇರವಾಗಿದ್ದೇವೆ, ಸಂಘವು ಬೆಳೆಯಬೇಕಾದರೆ ರೈತರ,ಹಾಗೂ ಸಿಬ್ಬಂದಿ ವರ್ಗದವರ ಕಾರ್ಯಕ್ಷಮತೆ ಜೊತೆಯಲ್ಲಿ ಸದಸ್ಯರ ಹೊಣೆಗಾರಿಕೆಯು ತುಂಬಾ ಮುಖ್ಯವಾಗಿದೆ.ಯಾರೇ ರೈತರು ಸಾಲ ಪಡೆದರು, ಸಕಾಲಕ್ಕೆ ಸಾಲ ಮರುಪಾವತಿ ಮಾಡುವ ಮೂಲಕ ಪ್ರತಿಯೊಬ್ಬರು ನೇರವಾಗಬೇಕು.ಸಂಘ ಲಾಭದಲ್ಲಿದ್ದರೆ ಸಾಲ ಸೌಲಭ್ಯಗಳು ಹೆಚ್ಚಿನ ರೀತಿಯಲ್ಲಿ ದೊರೆಯುತ್ತದೆ ಹೀಗಾಗಿ ಎಲ್ಲಾರೂ ಕೂಡಿ ಸಲಹೆ ಸಹಕಾರದಿಂದ ಕೆಲಸ ಮಾಡಿ ಇನ್ನು ಹೆಚ್ಚಿನ ಲಾಭದಲ್ಲಿ ಸಂಘವನ್ನು ತೆಗೆದುಕೊಂಡು ಹೋಗೋಣ ಎಂದರು.ಸಂಘದ ಮುಖ್ಯಕಾರ್ಯ ನಿರ್ವಾಹಕ ಅಲ್ಲಮಪ್ರಭು ಕಳೆದ ವರ್ಷದ ಲೆಕ್ಕ ಪತ್ರ,ಮತ್ತು ಠರಾವ್ ಹಾಗೂ ವರದಿಯನ್ನು ಮಂಡಿಸಿದರು. ಕೇಲವು ರೈತರು ಸಂಘದ ಲೆಕ್ಕಪತ್ರದ ಬಗ್ಗೆ ಮಾಹಿತಿ ಕೇಳಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ದುರುಗಪ್ಪ ಉಪ್ಪಾರ, ನಿರ್ದೇಶಕರಾದ ಶಿವಕುಮಾರ್ ಪಾಟೀಲ, ವೆಂಕಟೇಶ, ರಾಮನಗೌಡ ಮಾ.ಪಾ, ಬಸವರಾಜಗೌಡ ಕೋಡೆಕಲ್, ನಾಗರಾಜ ಕುಂಬಾರ, ಬಾಹುದೀನ್, ಕೆ.ಲಿಂಗರಾಜ, ತಿಪ್ಪಯ್ಯ ವಡ್ಡರ್, ಗೋಳಪ್ಪ, ಬೀರಪ್ಪ ಸೇರಿದಂತೆ ಸಂಘದ ಸದಸ್ಯರು ಸಂಘದ ಮುಖ್ಯ ಕಾರ್ಯನಿರ್ವಾಹಕ ಅಲ್ಲಮಪ್ರಭು ಹಾಗೂ ಸಿಬ್ಬಂದಿಗಳು ಇದ್ದರು.

# 15 ದಿನಗಳಲ್ಲಿ ಕೆಲಸ ಆರಂಭವಾಗದಿದ್ದರೆ 'ರೋಡ್ ಬಂದ್' ಎಚ್ಚರಿಕೆ

**ಯುವ ಮಾರ್ಗ ಸುದ್ದಿ**



**ರಾಯಚೂರು,ಸೆ.26–** ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (SDPI) ಪಕ್ಷವು ಶುಕ್ರವಾರ ರಾಯಚೂರಿನ ಎಲ್.ಬಿ.ಎಸ್. ನಗರದ ಕ್ರೌನ್ ಬೇಕರಿ ಸರ್ಕಲ್ ಬಳಿ ರಸ್ತೆ ಅಭಿವೃದ್ಧಿ ಮತ್ತು ಸಂಚಾರ ಭದ್ರತಾ ವಿಚಾರವಾಗಿ ಪ್ರತಿಭಟನೆ ನಡೆಸಿತು. ಶಮ್ಸ್ ಆಲಂ ದರ್ಗಾದಿಂದ ಎಲ್.ಬಿ.ಎಸ್.ನಗರ ದವರೆಗೆ ನಿರ್ಮಾಣವಾಗುತ್ತಿರುವ ರಸ್ತೆಯ ಕೆಲಸ ಅಪೂರ್ಣ ಗೊಂಡಿದ್ದು, ಇದರಿಂದ ಸಾರ್ವ ಜನಿಕರಿಗೆ ತೊಂದರೆಯಾಗುತ್ತಿದೆ ಎಂದು SDPI ನಾಯಕರು ಆರೋಪಿಸಿದರು.

ರಸ್ತೆಯ ನಿರ್ಮಾಣ ಕಾರ್ಯ ಅಪೂರ್ಣವಾಗಿದ್ದು, ಪಾದಚಾರಿ ಮಾರ್ಗವೂ ಸಂಪೂರ್ಣಗೊಂಡಿಲ್ಲ. ಮುಖ್ಯವಾಗಿ, ಈ ರಸ್ತೆಯಲ್ಲಿ ಸ್ಟ್ರೀಟ್ ಲೈಟ್ಸ್ ಮತ್ತು ಸ್ಪೀಡ್ ಬ್ರೇಕರ್ಸ್ ಇಲ್ಲದಿರುವುದು ಹಲವು ಅಪಘಾತಗಳಿಗೆ ಕಾರಣವಾಗಿದೆ. ಈ ದುರಂತಗಳಲ್ಲಿ ಕೆಲವರು ಪ್ರಾಣ ಕಳೆದುಕೊಂಡಿದ್ದು, ಅನೇಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪಕ್ಷದ ನಾಯಕರು ಗಮನ ಸೆಳೆದಿದ್ದಾರೆ. ಈ ಹಿನ್ನೆಲೆಯಲ್ಲಿ ದೈನಂದಿನ ಸಂಚಾರಿಗಳು ಮತ್ತು ಸ್ಥಳೀಯರು ಸುರಕ್ಷತೆಯ ಕೊರತೆಯಿಂದ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ.

ಕೂಡಲೇ ರಸ್ತೆ ಮತ್ತು ಪಾದಚಾರಿ ಮಾರ್ಗವನ್ನು ತಕ್ಷಣ ಪೂರ್ಣಗೊಳಿಸಬೇಕು. ಸಂಚಾರಿಗಳ ಭದ್ರತೆಗಾಗಿ ಸರಿಯಾದ ಸ್ಟ್ರೀಟ್ ಲೈಟ್ಸ್‌ಗಳನ್ನು ಅಳವಡಿಸಬೇಕು.ಅಪಘಾತಗಳನ್ನು ತಡೆಯಲು ಸೂಕ್ತ ಸ್ಪೀಡ್ ಬ್ರೇಕರ್ಸ್‌ಗಳನ್ನು ನಿರ್ಮಿಸಬೇಕು.

ಮುಂದಿನ 15 ದಿನಗಳ ಒಳಗೆ ರಸ್ತೆ ಕಾಮಗಾರಿ ಮತ್ತು ಸುರಕ್ಷತಾ ಕ್ರಮಗಳ ಕೆಲಸವನ್ನು ಆರಂಭಿಸದಿದ್ದರೆ, ಉಗ್ರ ಸ್ವರೂಪದ ರೋಡ್ ಬಂದ್ ಆಂದೋಲನವನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಪ್ರತಿಭಟನೆಯಲ್ಲಿ ಜಿಲ್ಲಾ ನಾಯಕ ಎಂ.ಡಿ. ಶಫಿ, ನಗರ ಅಧ್ಯಕ್ಷ ಸಾದಿಕ್, ನಗರ ಉಪಾಧ್ಯಕ್ಷ ಖಾಜಾ ಮೊಯಿನ್ನುದ್ದೀನ್, ವಾರ್ಡ್ 28 ಶಾಖಾ ಅಧ್ಯಕ್ಷ ರಿಯಾಜ್, ಮಹಾಸಚಿವ ಅರಿಫ್, ವಾರ್ಡ್ 29 ಶಾಖಾ ಕಾರ್ಯದರ್ಶಿ ಬಂದೆನವಾಜ್, ಆಟೋ ಸ್ಟ್ಯಾಂಡ್ ಅಧ್ಯಕ್ಷ ಅನೀಸ್ ಪಾಷಾ, ನಗರ ಮಂಡಳಿಯ ಸದಸ್ಯ ಜಲಾಲ್, ಶೈಖ ಸೇರಿದಂತೆ ಅನೇಕ ಸ್ಥಳಿಯರು ಮತ್ತು ಪಕ್ಷದ ಬೆಂಬಲಿಗರು ಭಾಗವಹಿಸಿದ್ದರು.

# ಕ್ಷಯಮುಕ್ತ ಭಾರತಕ್ಕಾಗಿ ಕ್ಷಯಮುಕ್ತ ಅಭಿಯಾನ: ಡಾ.ಶರಣಬಸವರಾಜ

**ಯುವ ಮಾರ್ಗ ಸುದ್ದಿ**



**ಮಾನ್ವಿ,ಸೆ.26–**ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಆರೋಗ್ಯ ಇಲಾಖೆ, ಕ್ಷಯರೋಗ ನಿರ್ಮೂಲನಾ ಘಟಕ ಮಾನ್ವಿ ಸಂಯುಕ್ತ ಆಶ್ರಯದಲ್ಲಿ ನಡೆದ ಕ್ಷಯರೋಗದ ಕುರಿತು ಜಾಗೃತಿ ಕಾರ್ಯಕ್ರಮಕ್ಕೆ ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ ಚಾಲನೆ ನೀಡಿ ಮತನಾಡಿ, ಆರೋಗ್ಯ ಇಲಾಖೆಯ ಕ್ಷಯಮುಕ್ತ ಅಭಿಯಾನದಲ್ಲಿ ಹಿರಿಯ ನಾಗರಿಕರಿಗೆ, ದೀರ್ಘಕಾಯಿಲೆಯಿಂದ ಬಳಲುವವರಿಗೆ ,ಮಧುಮೇಹಿಗಳಿಗೆ , ರಕ್ತ ಹೀನತೆಯಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಉಚಿತವಾಗಿ ಪರೀಕ್ಷೆಮಾಡ ಲಾಗುವುದು. ಪ್ರತಿಯೊಬ್ಬರು ಕೂಡ ಕ್ಷಯರೋಗ ಪರೀಕ್ಷೆ ಮಾಡಿಸಿಕೊಂಡು ಕ್ಷಯಮುಕ್ತ ಅಭಿಯಾನಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ತಾ. ಕ್ಷಯರೋಗ ನಿರ್ಮೂಲನಾ ಘಟಕದ ಮೇಲ್ವಿಚಾರಕರಾದ ಶಿವರಾಜ ಮಾತನಾಡಿ ಕ್ಷಯರೋಗ ಒಂದು ಸಾಂಕ್ರಾಮಿಕ ರೋಗವಾಗಿದೆ ಕ್ಷಯರೋಗದ ಲಕ್ಷಣ ಇರುವವರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಕೆಮ್ಮುವುದರಿಂದ ಮೈಕೋ ಬ್ಯಾಕ್ಟೀರಿಯಂ ಟ್ಯುಬರ್ ಕ್ಲೊಸಸ. ಬ್ಯಾಕ್ಟೀರಿಯಾ ಗಾಳಿ ಮೂಲಕ. ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸಾಧ್ಯತೆ ಹೆಚ್ಚು ಅದ್ದರಿಂದ ಕ್ಷಯರೋಗ ಪರೀಕ್ಷೆ ಮಾಡಿಸಿಕೊಂಡು ಅಗತ್ಯ ಚಿಕಿತ್ಸೆ ಪಡೆದು ಗುಣಮುಖರಾಗುವಂತೆ ಕೋರಿದರು.

ಹಿರಿಯ ಆರೋಗ್ಯ ನಿರೀಕ್ಷಣಾ ಅಧಿಕಾರಿ ಸುಧೀರ್ ಬಾಬು , ಕಚೇರಿ ವ್ಯವಸ್ಥಾಪಕರಾದ ರಾಜೇಶ, ಆಶಾ ಮೇಲ್ವಿಚಾರಕರಾದ ಮರಿಯಮ್ಮ ಹಾಗೂ ಅರೋಗ್ಯ ಇಲಾಖೆ ಸಿಬ್ಬಂದಿ. ಆಶಾ ಕಾರ್ಯಕರ್ತರು ಇದ್ದರು.

# ಅಲೆಮಾರಿಗಳ ಪ್ರತ್ಯೇಕ ಮೀಸಲಾತಿಗಾಗಿ ದೆಹಲಿ ಚಲೋ



**ಬಳ್ಳಾರಿ, ಸೆ.26–** ರಾಜ್ಯದಲ್ಲಿನ ಅಲೆಮಾರಿಗಳಿಗೆ ಪರಿಶಿಷ್ಟ ಜಾತಿ ಮೀಸಲಾತಿಯಲ್ಲಿ ಶೆ.1 ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಎಐಸಿಸಿ ನಾಯಕ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಒತ್ತಾಯ ಮಾಡಲು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಅ.2 ರಂದು ದೆಹಲಿ ಚಲೋ ಹಮ್ಮಿಕೊಂಡಿದೆ.

ಒಕ್ಕೂಟದ ಜಿಲ್ಲಾ ಅಧ್ಯಕ್ಷ ಶಿವಕುಮಾರ್ ನಗರದಲ್ಲಿ ಇಂದು ಸುದ್ದಿಗೋಷ್ಟಿ ನಡೆಸಿ. ರಾಜ್ಯದ ಅಲೆಮಾರಿ ಜನತೆಗೆ ಶೇ 1 ರಷ್ಟು ಮೀಸಲಾತಿ ನೀಡಬೇಕೆಂದು ಜಸ್ಟಿಸ್ ನಾಗಮೋಹನ್ ದಾಸ್ ಆಯೋಗದ ವರದಿ ಹೇಳಿತ್ತು.

ಆದರೆಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸಭೆಯಲ್ಲಿ ಇದನ್ನು ಒಪ್ಪಿಲ್ಲವೆಂದು ಶೇ 5 ಮೀಸಲಾತಿಯ ಇತರ ಗುಂಪಿನಲ್ಲಿ ನಮ್ಮನ್ನು ಸೇರಿಸಿರುವುದು ಸರಿಯಲ್ಲ.

ಅದಕ್ಕಾಗಿ ರಾಜ್ಯ ಸರ್ಕಾರಕ್ಕೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಅ.2 ರಂದು ದೆಹಲಿಗೆ 1000 ಅಲೆಮಾರಿಗಳು ತೆರಳಿ ಮನವಿ ಮಾಡಲಿದೆ. ಇದಕ್ಕೆ ಸ್ಪಂದಿಸದಿದ್ದರೆ ಚುನಾವಣೆ ಸಂದರ್ಭದಲ್ಲಿ ನಾವು ಪಾಠಕಲಿಸಲಿದ್ದೇವೆ.

ನಮಗಾಗಿರುವ ಅನ್ಯಾದ ವಿರುದ್ದ ಕೋರ್ಟ್ ಮೊರೆ ಹೋಗಿದೆ. ಅಲ್ಲಿ ನಮಗೆ ನ್ಯಾಯ ಸಿಕ್ಕೇ ಸಿಕ್ಕುತ್ತದೆ ಎಂದರು.

ರಾಮಾಂಜಿನಿ, ಜಿ.ಬಾಬು, ಧನುಶ್, ಸತ್ಯಪ್ಪ, ಸುಬ್ಬಣ್ಣ, ಮಹೇಶ್, ಅಜ್ಜಪ್ಪ, ಮೊದಲಾದವರು ಇದ್ದರು.

# ಜನಹಿತ ಕಾಪಾಡುವ ಜಿಎಸ್ಟಿ ಸರಳೀಕರಣ



**ಇಂಡಿ, ಸೆ.26–**ಪ್ರಧಾನಿ ನರೇಂದ್ರ ಮೋದಿ ಅವರು ಜಿಎಸ್ಟಿ ಪರಿಷ್ಕರಿಸಿ,ಸರಳೀಕರಣಗೊಳಿಸಿದ್ದರಿಂದ ಬಡವರು,ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಿದೆ. ಜಿಎಸ್ಟಿ ಸರಳಿಕರಣಗೊಳಿಸಿದ್ದರಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷ ಬರುವ 15 ಸಾವಿರ ಕೋಟಿ ಕಡಿತಗೊಳ್ಳುತ್ತಿದ್ದು,ಮುಖ್ಯಮಂತ್ರಿಗಳು ವಿರೋಧ ಮಾಡುತ್ತಿದ್ದಾರೆ. ಜಿಎಸ್ಟಿ ಅನುಧಾನದಲ್ಲಿಯೇ ಯೋಜನೆಗಳನ್ನು ರೂಪಿಸಿರುವ ರಾಜ್ಯ ಸರ್ಕಾರಕ್ಕೆ ಜಿಎಸ್ಟಿ ಕಡಿತದಿಂದ ತೊಂದರೆಯಾಗುತ್ತಿರುವುದರಿಂದ ಜಿಎಸ್ಟಿ ಕಡಿತ,ಸರಳೀಕರಣಕ್ಕೆ ವಿರೋಧಿಸುತ್ತಿದ್ದಾರೆ ಎಂದು ಬಿಜೆಪಿ ಇಂಡಿ ಮಂಡಲ ಅಧ್ಯಕ್ಷ ಹಣಮಂತ್ರಾಯಗೌಡ ಪಾಟೀಲ ಆರೋಪಿಸಿದರು.

ಪಟ್ಟಣದ ಶ್ರೀ ಶಾಂತೇಶ್ವರ ಮಂಗಲ ಕಾರ್ಯಾಲಯದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಪ್ರಧಾನಿ ಮೋದಿ ಅವರು ಜಿಎಸ್ಟಿ ಇಳಿಸಿದ್ದರಿಂದ ದೇಶದ ಅಭಿವೃದ್ದಿಯ ಜತೆಗೆ ಪ್ರಜೆಗಳಿಗೆ ಅನುಕೂಲವಾಗಿದೆ.ಇದು ಜನಹಿತ ಕಾಪಾಡುವ ಜಿಎಸ್ಟಿ ಸರಳಿಕರಣ ಕೆಲಸವಾಗಿದೆ ಎಂದು ಹೇಳಿದರು.

ರಾಜ್ಯದ ಸಾಮಾನ್ಯ ಜನರ ತೆರಿಗೆ ಹಣದಲ್ಲಿ ರಾಜ್ಯ ಸರ್ಕಾರ ಸಾಮಾಜಿ,ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿರುವುದು ಹಿಂದೂ ಧರ್ಮದ ಎಲ್ಲ ಸಮಾಜಗಳಿಗೆ ಬಾಧಕವಾಗಿದೆ.ಹಿಂದೂಳಿದ ಎಲ್ಲ ಜಾತಿಗಳಲ್ಲಿ ಕ್ರೀಶ್ಚನ್ ಎಂಬ ಪದ ಸೇರಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ, ರಾಹುಲ್ ಗಾಂಧಿ ತಾಳಕ್ಕೆ ಕುಣಿಯುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಈ ಸಮೀಕ್ಷೆಯಿಂದ ಹಿಂದೂ ಧರ್ಮದ ಹಲವು ಜಾತಿಗಳಿಗೆ ಅನ್ಯಾಯವಾಗುತ್ತದೆ. ಸಮಿಕ್ಷೆಯಿಂದ ಹಿಂದೂ ಧರ್ಮ ಸಂಪೂರ್ಣ ಒಡೆಯುವ, ಪಜಾ ಸಮುದಾಯಕ್ಕೆ ಸಿಗುವ ಸೌಲಭ್ಯಗಳು ಸಿಗದಂತೆ,ಎಸ್ಸಿ ಸಮುದಾಯಕ್ಕೆ ಶಕ್ತಿ ಇಲ್ಲದಂತೆ ಮಾಡುವ ಕುತಂತ್ರವಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರದ ಹಲವು ಸಚಿವರನ್ನು ಇದನ್ನು ವಿರೋಧಿಸಿದ್ದಾರೆ.ಆದರೂ ಮುಖ್ಯಮಂತ್ರಿಗಳು ಹಟಕ್ಕೆ ಬಿದ್ದಂತೆ ಈ ಸಮೀಕ್ಷೆ ಮುಂದುವರೆಸಿದ್ದಾರೆ.ನ್ಯಾಯಯುತ ಸಮೀಕ್ಷೆ ನಡೆಸಬೇಕು. ಹಿಂದೂ ಧರ್ಮಕ್ಕೆ ಅನ್ಯಾಯವಾಗದಂತೆ ನಡೆಯಬೇಕು. ಇರುವ ಜಾತಿಗಳನ್ನೇ ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಕಾಸುಗೌಡ ಬಿರಾದಾರ, ಮಲ್ಲಿಕಾರ್ಜುನ ಕಿವಡೆ, ಶೀಲವಂತ ಉಮರಾಣಿ, ಸಿದ್ದಲಿಂಗ ಹಂಜಗಿ,ಅನೀಲ ಜಮಾದಾರ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H